بِسْمِ اللهِ الرَّحْمٰنِ الرَّحِيْم    نَحْمَدُهٗ وَنُصَلِّی عَلٰی رَسُوْلِهِ الْکَرِیْم    وَعَلٰی عَبْدِهِ الْمَسِیْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 05

ಸಂಚಿಕೆ: 15

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

11 ಏಪ್ರಿಲ್ 2024, 11 ಶಹಾದತ್ 1403 ಹಿಜರಿ ಶಮ್‌ಸಿ,
29 ರಮಝಾನ್ 1445 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَعَدَ اللّٰهُ الْمُؤْمِنِيْنَ وَالْمُؤْمِنٰتِ جَنّٰتٍ
تَجْرِيْ مِنْ تَحْتِهَا الْاَنْهٰرُ خٰلِدِيْنَ فِيْهَا
وَمَسٰكِنَ طَيِّبَةً فِيْ جَنّٰتِ عَدْنٍ ؕ وَرِضْوَانٌ
مِّنَ اللّٰهِ اَكْبَرُ ؕ ذٰلِكَ هُوَ الْفَوْزُ الْعَظِيْمُ

**(ಸೂರತುತ್ತೌಬ : 72)**

**ಅಂದರೆ: ಸತ್ಯವಿಶ್ವಾಸಿಗಳಿಗೂ ಸತ್ಯವಿಶ್ವಾಸಿನಿಯರಿಗೂ ಕೆಳಭಾಗದಲ್ಲಿ ಹೊಳೆಗಳು ಹರಿಯುವ ಸ್ವರ್ಗೀಯ ತೋಟಗಳು ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಅವರು ಅಲ್ಲಿ ಸದಾ ಕಾಲ ನೆಲೆಸುವರು. ಶಾಶ್ವತವಾದ ವಾಸಕ್ಕಿರುವ ಸ್ವರ್ಗೀಯ ತೋಟಗಳಲ್ಲಿ ಪರಿಶುದ್ಧವಾದ ವಾಸಸ್ಥಳಗಳನ್ನೂ ಅಲ್ಲಾಹನು ಅವರಿಗೆ ವಾಗ್ದಾನ ಮಾಡಿರುವನು. ಅಲ್ಲಾಹನ ಸಂತುಷ್ಟಿಯೇ ಎಲ್ಲಕ್ಕಿಂತ ಮಿಗಿಲಾದುದು. ಅದೇ ಮಹಾ ವಿಜಯವಾಗಿದೆ.**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಎರಡೂ ಈದ್‌ಗಳ ರಾತ್ರಿಯಲ್ಲಿ ತಹಜ್ಜುದ್ ಪಠಿಸುವವನ ಹೃದಯವು ಶಾಶ್ವತವಾಗಿ ಪುನರುಜ್ಜೀವಗೊಳಿಸಲಾಗುವುದು

* ಹಝ್‌ರತ್ ಪೈಗಂಬರ್[ಸ] ನುಡಿದರು, ಯಾರು ಅಲ್ಲಾಹನಿಗೋಸ್ಕರ ಮಾತ್ರ ಎರಡೂ ಈದ್‌ಗಳ ರಾತ್ರಿಯಲ್ಲಿ ಆರಾಧಿಸುವವನೋ, ಅವನ ಹೃದಯ ಶಾಶ್ವತವಾಗಿ ಪುನರುಜ್ಜೀವನಗೊಳ್ಳುತ್ತದೆ. ಮತ್ತು ಪ್ರಪಂಚದ ಎಲ್ಲಾ ಹೃದಯಗಳು ಸತ್ತರೂ ಅವನ ಹೃದಯವು ಸಾಯುವುದಿಲ್ಲ.

(ಸುನನ್ ಇಬ್ನು ಮಾಜ, ಕಿತಾಬುಸ್ಸಿಯಾಮ್, ಹದೀಸ್-1782)

* ರಸೂಲುಲ್ಲಾಹ್[ಸ] ಅವರು ನುಡಿದರು, ತಮ್ಮ ಈದ್‌ಗಳನ್ನು ಅಲ್ಲಾಹನ ಮಹಿಮೆಯನ್ನು ವಿವರಿಸುತ್ತಾ ಅಲಂಕರಿಸಿರಿ.

(ಕನ್‌ಝುಲ್ ಆಅ್‌ಮಾಲ್. ಭಗ-8, ಪುಟ-546, ಹದೀಸ್-24094, ಮುಅಸ್ಸಸುರ್ರಿಸಾಲ ಬೈರೂತ್ 1985)

* ರಸೂಲುಲ್ಲಾಹ್[ಸ] ಅವರು ನುಡಿದರು, ತಕ್ಬೀರ್ ಪಠಿಸುವ ಮೂಲಕ, ಅಲ್ಲಾಹನನ್ನು ಸ್ತುತಿಸುವುದರ ಮೂಲಕ ಮತ್ತು ಅಲ್ಲಾಹನ ಪವಿತ್ರತೆಯನ್ನು ತೋರಿಸುವುದರ ಮೂಲಕ ನಿಮ್ಮ ಈದ್‌ಗಳನ್ನು ಅಲಂಕರಿಸಿರಿ.

(ಕನ್‌ಝುಲ್ ಆಅ್‌ಮಾಲ್, ಭಾಗ-8, ಪುಟ-546, ಹದೀಸ್-24095, ಮುಅಸ್ಸಸುರ್ರಿಸಾಲ ಬೈರೂತ್ 1985)

(ಆಧಾರ ಖುತುಬ ಜುಮುಅ ಹುಝೂರ್ ಅನ್ವರ್[ಅಬಿಅ] 14 ನವೆಂಬರ್ 2004)

### *ವಿಶೇಶ ಸೂಚನೆ*

"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.
ಮೊಬೈಲ್ ಸಂಖ್ಯೆ: 9866358609
(ವ್ಯವಸ್ಥಾಪಕರು)

ನೆನಪಿಡಬೇಕಾದ ವಿಷಯವೇನೆಂದರೆ ಈದ್ ದಿನ ಹೆಚ್ಚು ಆರಾಧನೆಗಳನ್ನು ಮಾಡುವ ದಿನವಾಗಿದೆ. ಬೇರೆ ದಿನಗಳಲ್ಲಿ ಐದು ಹೊತ್ತಿನ ನಮಾಝ್ ಫರ್ಝ್ ಆಗಿದೆ. ಆದರೆ ಈದ್ ದಿನ ಆರು ನಮಾಝ್‌ಗಳು ಫರ್ಝ್ ಆಗಿವೆ.

ಈದ್ ದಿನದ ಸಂತೋಷದಲ್ಲಿ ಅನಾಥರನ್ನೂ ನಿರ್ಗತಿಕರನ್ನೂ ಬಡವರನ್ನೂ ಗಮನಿಸಿ ಅವರಿಗೆ ಸಹಾಯ ನೀಡಬೇಕು. ಈದ್ ದಿನದಂದು ಅವರ ಬಗ್ಗೆ ವಿಶಿಷ್ಟ ಶ್ರದ್ಧೆ ನೀಡಬೇಕು.

ಈ ದಿನ ನಾವು ಪ್ರತಿಜ್ಞೆ ಮಾಡಬೇಕು, ಅಲ್ಲಾಹನ ಹಕ್ಕುಗಳನ್ನು ಈಡೇರಿಸುವ ಪ್ರಯತ್ನವನ್ನು ಸ್ಥಿರವಾಗಿ ಇನ್ನು ಮುಂದೆ ಮಾಡುವೆನು. ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸಿಕೊಡಲು ನಾನು ನಿರಂತರ ಪ್ರಯತ್ನಮಾಡುತ್ತಾ ಇರುವೆನು. ಹೀಗೆ ಮಾಡುವುದಾದರೆ ನಮ್ಮ ಈದ್‌ಗಳು ನೈಜ ಈದ್‌ಗಳಾಗುವುವು.

## *ಸಯ್ಯದುನಾ ಹಝ್‌ರತ್ ಖಲೀಫತುಲ್ ಮಸೀಹ್ ಅಲ್-ಖಾಮಿಸ್[ಅತಬಿಅ] ಅವರ ಅಧ್ಯಾಪನೆಗಳು*

ಇಂದು ಈದ್ ದಿನಾಚರಣೆ ಮಾಡಲು ಅಲ್ಲಾಹನು ನಮಗೆ ಭಾಗ್ಯವನ್ನು ನೀಡಿರುವನು. ಆದರೆ ಒಬ್ಬ ಯಥಾರ್ಥ ಸತ್ಯ ವಿಶ್ವಾಸಿಗೆ ಈದ್ ಎಂದರೆ ಕೇವಲ ಇಷ್ಟು ಮಾತ್ರವಲ್ಲ: ಒಳ್ಳೆಯ ಬಟ್ಟೆ ಧರಿಸುವುದು, ಒಳ್ಳೆಯ ಆಹಾರ ತಿನ್ನುವುದು, ಸ್ನೇಹಿತರೊಂದಿಗೆ ಕುಳಿತುಕೊಂಡು ಹರಟೆ ಮಾತುಗಳನ್ನಾಡಿ ಸಮಯ ಕಳೆಯುವುದು, ಈದ್ ನಮಾಝ್ ನಿರ್ವಹಿಸಿದ ನಂತರ, ಈದ್‌ಗೆ ಸಂಬಂಧಿಸಿದ ಫರ್ಝ್ ಈಡೇರಿಸಲಾಗಿದೆ ಇನ್ನು ಮುಂದೆ ಪೂರ್ಣ ಸ್ವಾತಂತ್ರ್ಯವಿದೆ. ಇಷ್ಟವಿರುವ ಹಾಗೆ ಮಾಡಬಹುದು ಎಂದು ಯೋಚಿಸುವುದು. ಈದ್ ದಿನ ಝುಹರ್ ನಮಾಝ್ ನಿಗದಿತ ಸಮಯದಲ್ಲಿ ನಿರ್ವಹಿಸುವ ಬಗ್ಗೆ ಯೋಚನೆ ಇಲ್ಲ. ಅಸರ್ ನಮಾಝ್ ಬಗ್ಗೆಯೂ ಯೋಚನೆ ಇಲ್ಲ. ಬೇರೆ ನಮಾಝ್‌ಗಳ ಬಗ್ಗೆ ಸಹ ಯೋಚನೆ ಇಲ್ಲ. ಏನಾದರೂ ಯೋಚನೆ ಉಂಟಾದರೂ ಸಹ ಬೇಗ ಬೇಗನೆ ನಮಾಝ್‌ಗಳನ್ನು ಜಮಾಯಿಸಿ ನಿರ್ವಹಿಸುತ್ತಾರೆ. ಕೆಲವು ಜನರು ಈದ್ ನಮಾಝ್ ಸಹ ನಿರ್ವಹಿಸುವುದಿಲ್ಲ. ಕೆಲವು ಜನರು ಈದ್ ನಮಾಝನ್ನು ನಿರ್ವಹಿಸಿದ ನಂತರ ಎದ್ದು ಈ ದಿನದ ಸಂಭ್ರಮಗಳಲ್ಲಿ ಭಾಗವಹಿಸಲು ಸಿದ್ಧರಾಗುತ್ತಾರೆ. ಅವುಗಳೇ ಈದ್ ದಿನದ ಉದ್ದೇಶ ಲಕ್ಷ್ಯಗಳಾಗಿವೆ ಎಂಬಂತೆ ವರ್ತಿಸುತ್ತಾರೆ. ನಾನು ಕೇವಲ ಬಾಯಿಮಾತಾಗಿ ಹೀಗೆ ಹೇಳುತ್ತಾ ಇಲ್ಲ. ಈದ್ ನಮಾಝ್ ನಿರ್ವಹಿಸದ ಜನರನ್ನು ನಾನು ನೋಡಿದ್ದೇನೆ. ಅವರು ಹೇಳುತ್ತಾರೆ - ನಮಗೆ ನಿದ್ರೆ ಬಂದಿತ್ತು ನಾವು ಮಲಗಿದ್ದೆವು.

ನೆನಪಿಡಬೇಕಾದ ವಿಷಯವೇನೆಂದರೆ ಈದ್ ದಿನ ಹೆಚ್ಚು ಆರಾಧನೆಗಳನ್ನು ಮಾಡುವ ದಿನವಾಗಿದೆ. ಬೇರೆ ದಿನಗಳಲ್ಲಿ ಐದು ಹೊತ್ತಿನ ನಮಾಝ್ ಫರ್ಝ್ ಆಗಿದೆ. ಆದರೆ ಈದ್ ದಿನ ಆರು ನಮಾಝ್‌ಗಳು ಫರ್ಝ್ ಆಗಿವೆ. ಎಷ್ಟರವರೆಗೆಂದರೆ, ಮಹಿಳೆಯರಿಗೆ ಕೆಲವು ದಿನಗಳಲ್ಲಿ ನಮಾಝ್ ಅನುಷ್ಠಿಸುವುದರಿಂದ ವಿನಾಯಿತಿ ನೀಡಲಾಗಿದ್ದರೂ ಅಂತಹ ಮಹಿಳೆಯರು ಸಹ ಈದ್‌ಗಾಹ್‌ಗೆ ಹೋಗಬೇಕೆಂದು ಆಜ್ಞಾಪಿಸಲಾಗಿದೆ. ಈದ್ ದಿನ ಕೇವಲ ಒಂದು ಹಬ್ಬ ಆಚರಿಸಲು ಜಮಾಯಿಸುವ ದಿನವಲ್ಲ. ಈದ್ ದಿನದಂದು, ಇತರ ದಿನಗಳಲ್ಲಿ ನಾವು ಮಾಡಬೇಕೆಂದು ಅಲ್ಲಾಹನು ಆಜ್ಞಾಪಿಸಿದ ಕೆಲಸಗಳನ್ನು ಹೆಚ್ಚು ಶ್ರದ್ಧೆಯಿಂದ ನಿರ್ವಹಿಸುವುದು ಆವಶ್ಯಕವಾಗಿದೆ. ಆರಾಧನೆಗೆ ಸಂಬಂಧಿಸಿದ ನಮ್ಮ ಹೊಣೆಗಾರಿಕೆಗಳನ್ನು ಈಡೇರಿಸುವ ಆವಶ್ಯಕತೆ ಇದೆ. ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸಿಕೊಡುವ ಹೊಣೆಗಾರಿಕೆಯನ್ನು ಪ್ರತಿಯೊಬ್ಬ ಸತ್ಯವಿಶ್ವಾಸಿಗೆ ವಹಿಸಿಕೊಡಲಾಗಿದೆ. ಆ ಹೊಣೆಗಾರಿಕೆಗಳನ್ನು ಈಡೇರಿಸುವುದು ಸಹ ಆವಶ್ಯಕವಾಗಿದೆ. ಈ ದಿನ ನಾವು ಪ್ರತಿಜ್ಞೆ ಮಾಡಬೇಕು, ಅಲ್ಲಾಹನ ಹಕ್ಕುಗಳನ್ನು ಈಡೇರಿಸುವ ಪ್ರಯತ್ನವನ್ನು ಸ್ಥಿರವಾಗಿ ಇನ್ನು ಮುಂದೆ ಮಾಡುವೆನು. ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸಿಕೊಡಲು ನಾನು ನಿರಂತರ ಪ್ರಯತ್ನಮಾಡುತ್ತಾ ಇರುವೆನು. ಹೀಗೆ ಮಾಡುವುದಾದರೆ ನಮ್ಮ ಈದ್‌ಗಳು ನೈಜ ಈದ್‌ಗಳಾಗುವುವು. ಇಂತಹ ಈದ್‌ಗಳನ್ನು ಗಳಿಸಲು ನಾವು ಪ್ರಯತ್ನಮಾಡಬೇಕು. ಅಲ್ಲಾಹನು ಆ

*(ಪುಟ ಸಂಖ್ಯೆ-08 ರಲ್ಲಿ ಮುಂದುವರಿಸಲಾಗಿದೆ)*

**ಈದ್ ಮುಬಾರಕ್** ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋಚ್ಚ ನೇತಾರ ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್[ಅತಬಿಅ] ಹಾಗೂ ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸದಸ್ಯರಿಗೆ **'ಬದರ್'** ವಾರಪತ್ರಿಕೆ ಖಾದಿಯಾನ್ ವತಿಯಿಂದ ಈದುಲ್ ಫಿತರ್ ಹಬ್ಬದ ಹಾರ್ದಿಕ ಶುಭಾಶಯಗಳು. ಸರ್ವಶಕ್ತನಾದ ಅಲ್ಲಾಹನು ಈ ಈದ್ ಅನ್ನು ಮುಸ್ಲಿಮ್ ಜಗತ್ತಿಗೆ ಅನುಗ್ರಹದಾಯಕವಾಗಲಿ. ಆಮೀನ್

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

## *129 ನೇ ಜಲ್ಸಾ ಸಾಲಾನ ಖಾದಿಯಾನ್ 27, 28, 29 ಡಿಸೆಂಬರ್ 2023ರಂದು ಆಯೋಜಿಸಲಾಗುವುದು*

ಸಯ್ಯದನಾ ಹುರ್ಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತೆಮಾ 2024 ನಡೆಯುವ ದಿನಾಂಕಗಳು

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 25, 26 ಮತ್ತು 27ನೇ ಅಕ್ಟೋಬರ್ 2023 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

## ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್‌ನ ಕಚೇರಿಗಳಲ್ಲಿ ಸೇವೆಸಲ್ಲಿಸಲು ಬಯಸುವವರು ಗಮನಹರಿಸಿರಿ

**ಎರಡನೇ ದರ್ಜೆಯ ಪೋಸ್ಟ್‌ಗಾಗಿ ಷರತ್ತುಗಳು**

(1) ಅಭ್ಯರ್ಥಿಯ ವಯಸ್ಸು 25 ವರ್ಷಗಳಿಗಿಂತ ಹೆಚ್ಚು ಮತ್ತು 18 ವರ್ಷಗಳಿಗಿಂತ ಕಡಿಮೆಯಿರಬಾರದು (2) ಅಭ್ಯರ್ಥಿಯು 45% ಅಂಕಗಳೊಂದಿಗೆ ಕನಿಷ್ಠ 10+2 ರ ಶೈಕ್ಷಣಿಕ ಅರ್ಹತೆಯನ್ನು ಹೊಂದಿರಬೇಕು (3) ಅಭ್ಯರ್ಥಿಯು ಉರ್ದು/ಇಂಗ್ಲಿಷ್ ಕಮ್ಪೋಝಿಂಗ್ ತಿಳಿದಿರಬೇಕು ಮತ್ತು ವೇಗದ ಮಿತಿ ಪ್ರತಿ ನಿಮಿಷಕ್ಕೆ 25 ಪದಗಳಾಗಿರಬೇಕು (4) ಈ ಪ್ರಕಟಣೆಯ ನಂತರ 2 ತಿಂಗಳೊಳಗೆ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುತ್ತದೆ.

ಎರಡನೇ ದರ್ಜೆಯವರಿಗೆ ಪರಿಕ್ಷೆ ಕೆಳಕಂಡಂತೆ ಪಠ್ಯಕ್ರಮದಂತೆ ಇರುತ್ತದೆ. ಪರಿಕ್ಷೆಯ ಪ್ರತಿ ಭಾಗದಲ್ಲೂ ಉತ್ತೀರ್ಣ ಆಗುವುದು ಕಡ್ಡಾಯವಾಗಿರುತ್ತದೆ.

**ಭಾಗ-1:** * ಪವಿತ್ರ ಖುರ್‌ಆನ್ ನಾಝಿರ ಪೂರ್ಣ, ಅನುವಾದದೊಂದಿಗೆ ಮೊದಲ ಭಾಗ * ಚಾಲೀಸ್ ಜವಾಹಿರ್ ಪಾರೆ. ಅರ್ಕಾನೆ ಇಸ್ಲಾಮ್, ಸಂಪೂರ್ಣ ನಮಾಝ್ ಅನುವಾದದೊಂದಿಗೆ. **(30 ಸಂಖ್ಯೆಗಳು)**

**ಭಾಗ-2:** ಕೆಶ್ತಿ ನೂಹ್, ಬರಕಾತುದ್ದುಆ, ದೀನೀ ಮಾಲೂಮಾತ್ * ಪ್ರಬಂಧ ಅಹ್ಮದೀಯ ಜಮಾತ್‌ನ ನಂಬಿಕೆಗಳು * ನಝುಮ್ ದುರ್ರೆ ಸಮೀನ್ (ಶಾನ್ ಇಸ್ಲಾಂ). **(20 ಅಂಕಗಳು)**

**ಭಾಗ-3:** ಇಂಗ್ಲಿಷ್ ಪದವಿ ಪೂರ್ವ ಶಿಕ್ಷಣದ (10+2) ಮಾನದಂಡದ ಪ್ರಕಾರ. **(20 ಅಂಕಗಳು)**

**ಭಾಗ-4:** ಮೆಟ್ರಿಕ್ ಮಾನದಂಡದ ಪ್ರಕಾರ ಅಂಕಗಣಿತ (ಆಫೀಸ್ ಇಂಪ್ರೆಸ್‌ಗೆ ಸಂಬಂಧಿಸಿದ ಪ್ರಶ್ನೆಗಳು). **(20 ಅಂಕಗಳು)**

**ಭಾಗ-5:** ಸಾಮಾನ್ಯಜ್ಞಾನ (ಜಿ.ಕೆ) **(10 ಅಂಕಗಳು)**

(6) ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳನ್ನು ಮತ್ರ ಸಂದರ್ಶಿಸಲಾಗುವುದು (7) ಲಿಖಿತ ಪರೀಕ್ಷೆ, ಕಂಪ್ಯೂಟರ್ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಯಶಸ್ಸಿನ ಸಂದರ್ಭದಲ್ಲಿ, ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯನ್‌ನಲ್ಲಿ ವೈದ್ಯಕೀಯ ತಪಾಸಣೆಗೆ ಒಳಗಾಗಬೇಕಾಗುತ್ತದೆ ಮತ್ತು ನೂರ್ ಆಸ್ಪತ್ರೆ ಸಮಿತಿಯ ವರದಿಯ ಪ್ರಕಾರ ಯಾರು ಆರೋಗ್ಯವಂತಿರುತ್ತಾರೊ ಆ ಅಭ್ಯರ್ಥಿಗಳು ಮಾತ್ರ ಸೇವೆಸಲ್ಲಿಸಲು ಅರ್ಹರಾಗಿರುತ್ತಾರೆ. (8) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಖಾದಿಯಾನ್‌ನಲ್ಲಿ ತನ್ನ ಸ್ವಂತ ವಸತಿಯನ್ನು ವ್ಯವಸ್ಥೆಗೊಳಿಸಬೇಕಾಗುತ್ತದೆ, ವಸತಿಗೆ ಸಂಬಂಧಿಸಿದಂತೆ ನಂತರ ಸ್ವೀಕರಿಸಿದ ಅರ್ಜಿಯ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಾಗುವುದಿಲ್ಲ. (9) ಖದಿಯಾನ್ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಸ್ವಂತ ಜವಾಬ್ದಾರಿಯಗಿರುತ್ತದೆ. **(ಗಮನಿಸಿ: ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ದಿನಾಂಕವನ್ನು ಅಭ್ಯರ್ಥಿಗಳಿಗೆ ನಂತರ ತಿಳಿಸಲಾಗುವುದು)**

***ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:***
ನಝಾರತ್ ದೀವಾನ್ ಸ್ ಅಂಜುಮನ್ ಅಹ್ಮದಿಯಾ
ಖಾದಿಯಾನ್-143516, ಮೊಬೈಲ್: 09682627592, 09682587713,
ಕಛೇರಿ: 01872-501130, ಇ-ಮೇಲ್: diwan@qadian.in

## ಪರಮಾಣು ವಿಕಿರಣದ ಹಾನಿಕಾರಕ ಪರಿಣಾಮಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಹೋಮಿಯೋಪತಿ ಮದ್ದು

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್(ಅತಬಿಅ) ರವರು ಪರಮಾಣು ವಿಕಿರಣದ ಹಾನಿಕಾರಕ ಪರಿಣಾಮಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಅಹ್ಮದಿಯಾ ಮುಸ್ಲಿಮ್ ಜಮಾಅತ್ತಿನ ಚತುರ್ಥ ಖಲೀಫರು ನಿರ್ದೇಶಿಸಿದಿ ಹೋಮಿಯೋಪತಿ ಮದ್ದನ್ನು ಕೆಳಗಿನಂತೆ ಉಪಯೋಗಿಸಲು ಆಜ್ಞಾಪಿಸಿದ್ದಾರೆ. ಅದೇ ರೀತಿ ಸರ್ವಶಕ್ತನಾದ ಅಲ್ಲಾಹನು ಪ್ರತಿಯೊಬ್ಬನನ್ನು ತನ್ನ ರಕ್ಷಣೆಯಲ್ಲಿರಿಸುವಂತೆ ದುಆ ಮಾಡಲು ಉಪದೇಶಿಸಿದ್ದಾರೆ.

**ಹುವಶ್ಶಾಫಿ**

| **ಉಪಯೋಗಿಸುವ ವಿಧಾನ** | | **ವಯಸ್ಕರರಿಗೆ** | **10 ರಿಂದ 15 ವರ್ಷ ಪ್ರಾಯದ ಮಕ್ಕಳಿಗೆ** | **10 ವರ್ಷಕ್ಕಿಂದ ಕಡಿಮೆ ಪ್ರಾಯದ ಮಕ್ಕಳಿಗೆ** | **ಗರ್ಭಿಣಿ/ಹಾಲುಣಿಸುವ ಮಹಿಳೆಯರಿಗೆ** |
|---|---|---|---|---|---|
| ಮದಲ ಸಲದ ಔಷಧಿ | | Carcinosin CM | Carcinosin 1000 | Carcinosin 200 | Carcinosin 1000 |
| ಮದಲ ಸಲದ ಔಷಧಿಯ 7 ದಿನದ ನಂತರ | ಎರಡನೇ ಸಲದ ಔಷಧಿ | Radium Brom CM | Radium Brom 1000 | Radium Brom 200 | Radium Brom 1000 |
| ಎರಡನೇ ಸಲದ ಔಷಧಿಯ 7 ದಿನದ ನಂತರ | ಮೂರನೇ ಸಲದ ಔಷಧಿ | Carcinosin CM | Carcinosin 1000 | Carcinosin 200 | Carcinosin 1000 |
| ಮೂರನೇ ಸಲದ ಔಷಧಿಯ 7 ದಿನದ ನಂತರ | ನಾಲ್ಕನೇ ಸಲದ ಔಷಧಿ | Radium Brom CM | Radium Brom 1000 | Radium Brom 200 | Radium Brom 1000 |
| ನಲ್ಕನೇ ಸಲದ ಔಷಧಿಯ 7 ದಿನದ ನಂತರ | ಐದನೇ ಸಲದ ಔಷಧಿ | Carcinosin CM | Carcinosin 1000 | Carcinosin 200 | Carcinosin 1000 |
| ಐದನೇ ಸಲದ ಔಷಧಿಯ 7 ದಿನದ ನಂತರ | ಆರನೇ ಸಲದ ಔಷಧಿ | Radium Brom CM | Radium Brom 1000 | Radium Brom 200 | Radium Brom 1000 |

**ಗಮನಿಸಿ:** ಮೇಲಿನ ಕೋರ್ಸ್ ಅನ್ನು ಪೂರ್ಣಗೊಳಿಸಿದ ಎರಡು ತಿಂಗಳ ನಂತರ, ಅದೇ ಪಾಕವಿಧಾನದೊಂದಿಗೆ ಈ ಔಷಧಿಗಳನ್ನು ಮತ್ತೊಮ್ಮೆ ಪುನರಾವರ್ತಿಸಿ.

# ಖುತ್‌ಬ ಜುಮುಅ

ಯಾ ರಸೂಲಲ್ಲಾಹ್(ಸ)! ನನ್ನ ತಂದೆ ತಾಯಿಗಳು ನಿಮಗೆ ಅರ್ಪಿತವಾಗಲಿ. ನೀವು ಸುರಕ್ಷಿತವಾಗಿದ್ದಾಗ, ನಾನು ಯಾವುದೇ ಹಾನಿಯ ಬಗ್ಗೆ ಚಿಂತಿಸುವುದಿಲ್ಲ.

ಉಹುದ್ ಯುದ್ಧದ ಸಂದರ್ಭದಲ್ಲಿ ಒಮ್ಮೆ ಹಝ್ರತ್ ಪೈಗಂಬರ್(ಸ) ಹಝ್ರತ್ ಸಅದ್(ರ) ಅವರಿಗೆ ಹೇಳಿದರು: ನನ್ನ ತಂದ ತಾಯಿ ನಿನಗಾಗಿ ಅರ್ಪಿತವಾಗಲಿ! ಸಮವಾಗಿ ಬಾಣಗಳನ್ನು ಬಿಡುತ್ತಾ ಇರು. ಸಅದ್(ರ) ತನ್ನ ಮರಣದ ವರೆಗೂ ಈ ವಾಕ್ಯವನ್ನು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು.

ಆ ಜನರು ವಾಸ್ತವವಾಗಿ ಸರ್ವಶಕ್ತನಾದ ಅಲ್ಲಾಹನ ಪ್ರೇಮಿಗಳಾಗಿದ್ದರು ಮತ್ತು ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಪೈಗಂಬರ್(ಸ) ಅವರನ್ನು ಪ್ರೀತಿಸುತ್ತಿದ್ದರಿಂದ ಅವರ ಸಹಾಬರವರು ಅವರನ್ನು ಪ್ರೀತಿಸುತ್ತಿದ್ದರು

ಮಕ್ಕಾದ ಮುಶ್ರಿಕರು ಬದ್ರ್‌ನ ವಿಪತ್ತುಗಳನ್ನು ಸ್ವಲ್ಪ ದೌರ್ಬಲ್ಯ, ಅಸಮಾಧಾನ ಮತ್ತು ಗಾಬರಿಯಿಂದ ಸ್ವೀಕಾರ ಮಾಡಿದರು. ಆದರೆ ಮದೀನದವರು ಉಹುದಿನ ವಿಪತ್ತನ್ನು ಸಾಟಿಯಿಲ್ಲದ ಸಹನೆ, ನಂಬಿಕೆ, ತಾಳ್ಮೆ, ಸ್ಥೈರ್ಯ ಮತ್ತು ಧೈರ್ಯದಿಂದ ಸ್ವೀಕಾರ ಮಾಡಿಕೊಂಡರು.

ನಿಸ್ಸಂಶಯವಾಗಿಯೂ ಮದೀನದ ವಿಪತ್ತು ಬಹಳ ವೇದನಾಜನಕ ವಿಪತ್ತಾಗಿತ್ತು. ಆದರೆ ಒಂದು ವಿಪತ್ತನ್ನು ಸ್ವೀಕಾರ ಮಾಡುವುದರಲ್ಲಿ ಮಕ್ಕಾದವರ ಮತ್ತು ಮದೀನದವರ ನಡುವೆ ಬಹಳ ಅಂತರವಿತ್ತು.

**ಉಹದ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರವರ ದುಆ ಸ್ವೀಕಾರ ಮತ್ತು ಸಹಾಬಗಳ ಮತ್ತು ಮಹಿಳೆ ಸಹಾಬಿಗಳ ಧೈರ್ಯ ಹಾಗೂ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಇದ್ದ ಪ್ರೀತಿ ಮತ್ತು ವಾತ್ಸಲ್ಯದ ವಿಶ್ವಾಸ ವರ್ಧಕ ಪ್ರಸ್ತಾವನೆ**

ಇತ್ತೀಚಿಗೆ ಶಹೀದ್ ಆದ ಬಹಾಲ್‌ಪುರ್ ಜಿಲ್ಲೆಯ ಚಕ್‌ಚೌರಾಸಿ ಫತಹ್‌ಪುರ್ ಜಮಾಅತಿನ ಸದರ್, ಖಿಝ್ರ್ ಹಯಾತ್ ಚೀಮ ಸಾಹಿಬ್‌ರ ಪುತ್ರರಾದ ತಾಹಿರ್ ಇಖ್‌ಬಾಲ್ ಚೀಮ ಸಾಹಿಬ್ ಅವರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **08-03-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ - اَلرَّحْمٰنِ الرَّحِيْمِ - مٰلِكِ يَوْمِ الدِّيْنِ -

اِيَّاكَ نَعْبُدُ وَاِيَّاكَ نَسْتَعِيْنُ - اِهْدِنَا الصِّرَاطَ الْمُسْتَقِيْمَ -

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ -

ಉಹುದ್ ಯುದ್ಧದಲ್ಲಿ ಸಹಾಬಿಯಾದ ಹಝ್ರತ್ ಸಅದ್(ರ) ಮಾಡಿದ ದುಆ ಸ್ವೀಕಾರಗೊಳ್ಳಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಮಾಡಿದ ದುಆ ಮತ್ತು ಅದರ ಸ್ವೀಕಾರದ ಪ್ರಸ್ತಾಪ ಹೀಗಿದೆ: ಆಯಿಶ ಬಿನ್ತ್ ಸಅದ್(ರ) ತನ್ನ ತಂದೆಯಾದ ಹಝ್ರತ್ ಸಅದ್(ರ)ರಿಂದ ಇದನ್ನು ವರದಿ ಮಾಡಿರುವರು. ಹಝ್ರತ್ ಸಅದ್(ರ) ಹೇಳುತ್ತಾರೆ: ಜನರು ಹಿಂತಿರುಗಿ ಪುನಃ ದಾಳಿ ನಡೆಸಿದಾಗ, ಅವರನ್ನು ಸ್ವತಃ ದೂರ ಮಾಡುವುದರಲ್ಲಿ ಯಶಸ್ವಿಯಾಗುವೆನು ಅಥವಾ ಶಹೀದ್ ಆಗುವೆನು ಎಂದು ನಾನು ಯೋಚಿಸಿದೆ. ಅಚಾನಕ್ಕಾಗಿ ನಾನು ಕೆಂಪು ಮುಖದ ಒಬ್ಬ ವ್ಯಕ್ತಿಯನ್ನು ಕಂಡೆನು. ಮುಶ್ರಿಕರು ಅವರ ಮೇಲೆ ಮೇಲುಗೈ ಸಾಧಿಸಬಹುದಾಗಿತ್ತು. ಅಷ್ಟರಲ್ಲಿ ಅವರು ತನ್ನ ಕೈಯನ್ನು ಕಲ್ಲುಗಳಿಂದ ತುಂಬಿ ಅವರ ಕಡೆಗೆ ಎಸೆದರು. ಅಚಾನಕ್ಕಾಗಿ ಆ ವ್ಯಕ್ತಿಯ ಮತ್ತು ನನ್ನ ನಡುವೆ ಮಿಖ್‌ದಾದ್(ರ) ಬಂದರು. ಅವರು ಹೇಳಿದರು: ಆ ವ್ಯಕ್ತಿ ರಸೂಲುಲ್ಲಾಹ್(ಸ) ಆಗಿದ್ದರು ಮತ್ತು ಅವರು ನಿಮ್ಮನ್ನು ಕರೆಯುತ್ತಿದ್ದರು. ಆಗ ನನಗೆ ಯಾವುದೇ ಕಷ್ಟತೆ ತಲುಪಿಲ್ಲ ಎಂಬ ರೀತಿಯಲ್ಲಿ ನನಗೆ ಅನಿಸಿತು. ನಾನು ಬೇಗನೇ ಎದ್ದು ನಿಂತು ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋದೆನು. ಅವರು ನನ್ನನ್ನು ತನ್ನ ಮುಂದೆ ಕುಳ್ಳಿರಿಸಿದರು. ನಾನು ಬಾಣ ಬಿಡಲು ತೊಡಗಿದೆನು ಮತ್ತು ನಾನು ಹೀಗೆ ದುಆ ಮಾಡುತ್ತಿದ್ದೆ: ಹೇ ಅಲ್ಲಾಹ್, ಇದು ನಿನ್ನ ಬಾಣವಾಗಿದೆ. ನೀನು ಇದರಿಂದ ನಿನ್ನ ಶತ್ರುಗಳನ್ನು ವಧಿಸು. ಆಗ ಹಝ್ರತ್ ಪೈಗಂಬರ್(ಸ) ಹೀಗೆ ಹೇಳುತ್ತಿದ್ದರು: ಹೇ ಅಲ್ಲಾಹ್, ನೀನು ಸಅದ್‌ನ ದುಆವನ್ನು ಸ್ವೀಕಾರ ಮಾಡು. ಹೇ ಅಲ್ಲಾಹ್, ಸಅದ್‌ನ ನಿಶಾನೆಯನ್ನು ಸರಿಪಡಿಸು. ಹೇ ಸಅದ್, ನಿನಗಾಗಿ ನನ್ನ ತಾಯಿ ತಂದೆ ಅರ್ಪಿತ. ಹಾಗಾಗಿ ನಾನು ಯಾವ ಬಾಣವನ್ನು ಹೊಡೆದರೂ ಹಝ್ರತ್ ಪೈಗಂಬರ್(ಸ)ರವರು ಹೇ ಅಲ್ಲಾಹ್! ನೀನು ಸಅದ್‌ನ ನಿಶಾನೆಯನ್ನು ಸರಿಪಡಿಸು ಎಂದು ಹೇಳುತ್ತಿದ್ದರು. ನಾನು ನನ್ನ ಬತ್ತಳಿಕೆಯ ಬಾಣಗಳನ್ನು ಹೊಡೆದು ಮುಗಿಸಿದಾಗಲೂ ಹಝ್ರತ್ ಪೈಗಂಬರ್(ಸ)ರವರು ತಮ್ಮ ಬತ್ತಳಿಕೆಯನ್ನು ಹರಡಿದರು ಮತ್ತು ಬತ್ತಳಿಕೆಯಿಲ್ಲದ ಮತ್ತು ಗರಿಯಿಲ್ಲದ ಬಾಣವನ್ನು ನನಗೆ ನೀಡಿದರು ಮತ್ತು ಅದರಲ್ಲಿ ಯಾವುದೇ ತುದಿಯೂ ಇರಲಿಲ್ಲ. ಮತ್ತು ಹಿಂದಿನಿಂದ ಅದನ್ನು ಸರಿಯಾಗಿರಲಿಲ್ಲ. ಅವರು ಹೇಳುತ್ತಾರೆ: ಅವರು ಆ ಬಾಣವು ಇತರ ಬಾಣಗಳಿಗಿಂತ ಚೂಪಾಗಿ ಸಾಬೀತಾಯಿತು. ಅಲ್ಲಾಮ ಝುಹ್‌ರಿ(ರಹ್) ಬರೆಯುತ್ತಾರೆ: ಅಂದು ಸಅದ್ ಒಂದು ಸಾವಿರ ಬಾಣಗಳನ್ನು ಹೊಡೆದಿದ್ದರು. (ಸ಼ಬ್ಲುಲ್ ಹುದಾ ವರ್ರಶ್ಶಾದ್, ಸಂಪುಟ-4, ಪುಟ-200-201, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಈ ಬಗ್ಗೆ ಬರೆದಿದ್ದಾರೆ, ಸಅದ್ ಬಿನ್ ವಕ್ಕಾಸ್(ರ) ಅವರಿಗೆ ಹಝ್ರತ್ ಪೈಗಂಬರ್(ಸ)ರವರು ಸ್ವತಃ ಬಾಣಗಳನ್ನು ನೀಡುತ್ತಿದ್ದರು ಮತ್ತು ಹಝ್ರತ್ ಸಅದ್(ರ) ಈ ಬಾಣಗಳನ್ನು ಶತ್ರುಗಳ ಮೇಲೆ ನಿರಂತರವಾಗಿ ಹೊಡೆಯುತ್ತಿದ್ದರು.

ಒಮ್ಮೆ ಹಝ್ರತ್ ಪೈಗಂಬರ್(ಸ) ಹಝ್ರತ್ ಸಅದ್(ರ) ಅವರಿಗೆ ಹೇಳಿದರು: ನನ್ನ ತಂದ ತಾಯಿ ನಿನಗಾಗಿ ಅರ್ಪಿತವಾಗಲಿ! ಸಮವಾಗಿ ಬಾಣಗಳನ್ನು ಬಿಡುತ್ತಾ ಇರು. ಸಅದ್(ರ) ತನ್ನ ಮರಣದ ವರೆಗೂ ಈ ವಾಕ್ಯವನ್ನು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು.
(ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-495)

ಉಹುದ್ ಯುದ್ಧದ ದಿನದಂದು ಹಝ್ರತ್ ಪೈಗಂಬರ್(ಸ)ರವರು ತಮ್ಮ ಬತ್ತಳಿಕೆಯಿಂದ ಬಾಣಗಳನ್ನು ಹೊರತೆಗೆದು ನನಗಾಗಿ ಹರಡಿದರು ಎಂದು ಹಝ್ರತ್ ಸಅದ್ ಬಿನ್ ಅಬಿ ವಕ್ಕಾಸ್(ರ) ಹೇಳುತ್ತಾರೆ ಎಂದು ಹದೀಸ್‌ನಲ್ಲಿ ಹೇಳಲಾಗಿದೆ, ಮತ್ತು ಅವರು(ಸ) ಹೇಳಿದರು: ಬಾಣಗಳನ್ನು ಬಿಡು. ನನ್ನ ತಂದೆ-ತಾಯಿಗಳು ನಿನಗಾಗಿ ಅರ್ಪಿತವಾಗಲಿ.
(ಸಹೀಹ್ ಬುಖಾರಿ, ಕಿತಾಬ್ ಅಲ್-ಮುಘಾಜಿ, ಹದೀಸ್-4055)

ಹಝ್ರತ್ ಪೈಗಂಬರ್(ಸ) ಆದೇಶದ ಮೇರೆಗೆ ಹಝ್ರತ್ ಉಮರ್(ರ)ರವರು ಖಾಲಿದ್ ಬಿನ್ ವಲೀದ್‌ನ ನೇತೃತ್ವದಲ್ಲಿ ಪರ್ವತದ ಮೇಲಿನ ದಾಳಿಯನ್ನು ಹೇಗೆ ವಿಫಲಗೊಳಿಸಿದರು.

ಇದರ ಬಗ್ಗೆ ಹೀಗೆ ಪ್ರಸ್ತಾಪವವಿದೆ. ಹಝ್ರತ್ ಪೈಗಂಬರ್(ಸ) ಸಹಾಬಿಯರ ಸಂಘದ ಜೊತೆಗೆ ಪರ್ವತದಲ್ಲಿ ನಿಂತಿದ್ದಾಗ ಅಚಾನಕ್ಕಾಗಿ ಖಾಲಿದ್ ಬಿನ್ ವಲೀದ್‌ರ ನೇತೃತ್ವದಲ್ಲಿ ಖುರೈಶಿನ ಒಂದು ಸಂಘ ಪರ್ವತದ ಮೇಲಕ್ಕೆ ತಲುಪಿತು. ಶತ್ರುಗಳು ಮೇಲೆ ಬರುವುದನ್ನು ಕಂಡು ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡಿದರು: **ಅಲ್ಲಾಹುಮ್ಮ ಇನ್ನಹೂ ಲಾ ಯನ್‌ಬಗೀ ಲಹುಮ್ ಅನ್ ಯಅ್‌ಲೂನಾ, ಅಲ್ಲಾಹುಮ್ಮ ಲಾ ಖುವ್ವತ ಲನಾ ಇಲ್ಲಾ ಬಿಕ–** ಹೇ ಅಲ್ಲಾಹ್, ಅವರು ನಮ್ಮ ಮೇಲೆ ವಿಜಯ ಸಾಧಿಸುವುದು ಸರಿಯಲ್ಲ. ಹೇ ಅಲ್ಲಾಹ್, ನಿನ್ನ ಮೂಲಕವಲ್ಲದೇ ನಮಗೆ ಬೇರೆ ಯಾವುದೇ ಶಕ್ತಿ ಮತ್ತು ಸಾಮರ್ಥ್ಯವಿಲ್ಲ. ಅದೇ ವೇಳೆ ಹಝ್ರತ್ ಉಮರ್ ಫಾರೂಖ್(ರ) ಮುಹಾಜಿರರ ಒಂದು ಸಂಘದೊಂದಿಗೆ ಅವರನ್ನು ಎದುರಿಸಿದರು ಮತ್ತು ಹಿಂದಕ್ಕೆ ತಳ್ಳಿ ಶತ್ರುಗಳನ್ನು ಪರ್ವತದಿಂದ ಕೆಳಗೆ ಇಳಿಯುವಂತೆ ಮಾಡಿದರು. ಈ ಘಟನೆಗೆ ಸಂಬಂಧಿಸಿ ಅಲ್ಲಾಹನ ಆಜ್ಞೆ ಹೀಗೆ ಅವತೀರ್ಣಗೊಂಡಿತು: **ವಲಾ ತಹಿನೂ ವಲಾ ತಹ್‌ಝನೂ, ಅಂತುಮುಲ್ ಅಅ್‌ಲೌನ ಇನ್‌ಕುಂತುಮ್ ಮುಅ್‌ಮಿನೀನ್**. (ಆಲಿಇಮ್ರಾನ್: 140) ಅರ್ಥ: ನೀವು ಬಲಹೀನತೆಯನ್ನು ತೋರಿಸಬೇಡಿರಿ ಮತ್ತು ದುಃಖಿಸಬೇಡಿರಿ. ನೀವು ಸತ್ಯವಿಶ್ವಾಸಿಗಳೆಂದಾದರೆ ಖಂಡಿತವಾಗಿಯೂ ನೀವೇ ಮೇಲುಗೈ ಸಾಧಿಸುವಿರಿ. (ಸೀರತುಲ್ ಹಲಬೀಯಃ, ಸಂಪುಟ–2, ಪುಟ–323, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಈ ಘಟನೆಯನ್ನು ವಿವರಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಹೇಳುತ್ತಾರೆ, ಹಝ್ರತ್ ಒಬಗಂಬರ್(ಸ) ಕಣಿವೆಯನ್ನು ತಲುಪಿದಾಗ, ಖಾಲಿದ್ ಬಿನ್ ವಲೀದ್ ಅವರ ನೇತೃತ್ವದಲ್ಲಿ ಖುರೈಷಿಗಳ ಗುಂಪು ಪರ್ವತದ ಮೇಲೆ ದಾಳಿ ಮಾಡಲು ಬಯಸಿತು, ಆದರೆ ಹಝ್ರತ್ ಪೈಗಂಬರ್(ಸ)ರ ಆದೇಶದ ಪ್ರಕಾರ ಹಝ್ರತ್ ಉಮರ್(ರ) ಕೆಲವು ಮುಹಾಜಿರೀನರನ್ನು ತಮ್ಮೊಂದಿಗೆ ಕರೆದೊಯ್ದು ಅವರೊಂದಿಗೆ ಹೋರಾಡಿ ಅವರನ್ನು ಹಿಮ್ಮೆಟ್ಟಿಸಿದರು. (ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–497)

ಗಾಯಾಳುವಾಗಿದ್ದು ಕೂಡ ಹಝ್ರತ್ ಪೈಗಂಬರ್(ಸ) ಸಹಾಬಿಯರ ಕುರಿತು ಚಿಂತಿತರಾಗಿದ್ದರು ಎಂಬುದರ ಬಗ್ಗೆ ಹಝ್ರತ್ ಆಯಿಶ(ರ) ಹೀಗೆ ವರದಿ ಮಾಡಿರುವರು: ಉಹುದಿನ ದಿವಸದ ಬಗ್ಗೆ ಪ್ರಸ್ತಾಪಿಸುವಾಗ, ಅಂದಿನ ಪೂರ್ತಿ ದಿನ ತಲ್‌ಹರದ್ದಾಗಿತ್ತು ಎಂದು ಹಝ್ರತ್ ಅಬೂಬಕರ್(ರ) ಹೇಳುತ್ತಿದ್ದರು. ಅನಂತರ ಅದರ ಬಗ್ಗೆ ವಿವರಿಸುತ್ತಾ ಹಝ್ರತ್ ಅಬೂಬಕರ್(ರ) ಹೇಳುತ್ತಾರೆ: ಉಹುದಿನ ದಿನದಂದು ಹಝ್ರತ್ ಪೈಗಂಬರ್(ಸ)ರ ಬಳಿಗೆ ಮರಳಿ ಹೋದವರಲ್ಲಿ ನಾನು ಸಹ ಇದ್ದೆನು ಮತ್ತು ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಅವರನ್ನು ರಕ್ಷಿತ್ತಿರುವುದಾಗ ಒಬ್ಬ ವ್ಯಕ್ತಿಯನ್ನು ಕಂಡೆನು. ವರದಿಗಾರರು ಹೇಳುತ್ತಾರೆ: ಆತನು ಹಝ್ರತ್ ಪೈಗಂಬರ್(ಸ) ಅವರನ್ನು ರಕ್ಷಿಸುತ್ತಿದ್ದನು ಎಂದು ಹಝ್ರತ್ ಅಬೂಬಕರ್(ರ) ಹೇಳಿದರು ಎಂದು ನಾನು ಭಾವಿಸುತ್ತೇನೆ. ಹಝ್ರತ್ ಅಬೂಬಕರ್(ರ) ಹೇಳಿದರು ಅವರು ತಲ್‌ಹ ಆಗಿರಬೇಕು. ನನಗೆ ಲಭಿಸಿದ ಸಂದರ್ಭವನ್ನು ನಾನು ಕಳೆದುಕೊಂಡೆ ನನ್ನ ಜನರಲ್ಲಿ ಯಾರಾದರು ಒಬ್ಬನಾಗಿದ್ದರೆ ಅದು ನನಗೆ ಹೆಚ್ಚು ಪ್ರಿಯ ಎಂದು ಮನದಲ್ಲೇ ಹೇಳಿಕೊಂಡೆ. ಆದಾಗ್ಯೂ, ನನ್ನ ಮತ್ತು ಹಝ್ರತ್ ಪೈಗಂಬರ್(ಸ)ರ ನಡುವೆ ಒಬ್ಬ ವ್ಯಕ್ತಿ ಇದ್ದನು ಆತನನ್ನನು ನಾನು ಗುರುತಿಸಲು ಸಾಧ್ಯವಾಗಲಿಲ್ಲ, ನಾನು ಹಝ್ರತ್ ಪೈಗಂಭರ್(ಸ)ರಿಗೆ ಹತ್ತಿರವಾಗಿದ್ದರೂ, ಆತನು ಎಷ್ಟು ವೇಗವಾಗಿ ನಡೆಯುತ್ತಿದ್ದನೆಂದರೆ ನನಗೆ ಅಷ್ಟು ವೇಗವಾಗಿ ನಡೆಯಲು ಸಾಧ್ಯವಾಗಲಿಲ್ಲ. ಆ ವ್ಯಕ್ತಿ ಅಬು ಉಬೈದಾ ಬಿನ್ ಜರ್ರಾಹ್(ರ) ಆಗಿದ್ದರು ಎಂದು ನಾನು ನೋಡಿದೆ. ತದನಂತರ ನಾನು ಹಝ್ರತ್ ಪೈಗಂಬರ್(ಸ)ರ ಬಳಿಗೆ ತಲುಪಿದಾಗ ಅವರ ಕೆಳಗಿನ ನಾಲ್ಕನೇ ಹಲ್ಲು, ಅಂದರೆ ಎರಡು ಮುಂಭಾಗದ ಹಲ್ಲು ಮತ್ತು ಮೊನಚಾದ ಹಲ್ಲಿನ ನಡುವಿನ ಹಲ್ಲು ಮುರಿದು ಮುಖಕ್ಕೆ ಗಾಯವಾಗಿತ್ತು. ಮತ್ತು ನಿಮ್ಮ ಖೌದ್ (ಶಿರಸ್ತ್ರಾಣ) ದ ಕಂಬಿಗಳು ನುಗ್ಗಿದ್ದುವು. ಹಝ್ರತ್ ಪೈಗಂಬರ್(ಸ) ಹೇಳಿದರು: ನೀವಿಬ್ಬರು ನಿಮ್ಮ ಸಂಗಡಿಗ, ಎಂದರೆ ತಲ್‌ಹರಿಗೆ ಸಹಾಯ ಮಾಡಿರಿ. ಹಝ್ರತ್ ಪೈಗಂಬರ್(ಸ)ರವರು ನನ್ನ ಕಡೆಗೆ ನೋಡಿ ಎಂದು ಹೇಳುವ ಬದಲು ಹೋಗಿ ತಲ್ಹಾವನ್ನು ನೋಡಿ ಎಂದು ಹೇಳಿದರು. (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ–4, ಪುಟ–199, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಝಿಯಾದ್ ಬಿನ್ ಸಕನ್ ಅವರ ಬಗ್ಗೆ ಹಝ್ರತ್ ಪೈಗಂಬರ್(ಸ) ಅವರ ಪ್ರೀತಿ ಮತ್ತು ದಯೆ ಮತ್ತು ಹಝ್ರತ್ ಪೈಗಂಬರ್(ಸ) ಅವರ ಮೇಲಿನ ಪ್ರೀತಿಯನ್ನು ಸಹ ಉಲ್ಲೇಖಿಸಲಾಗಿದೆ. ಇಬ್ನ್ ಇಸ್‌ಹಾಕ್ ಈ ಬಗ್ಗೆ ಬರೆದಿದ್ದಾರೆ. ಸತ್ಯನಿಷೇಧಿಗಳು ಹಝ್ರತ್ ಪೈಗಂಬರ್(ಸ)ರನ್ನು ಸುತ್ತುವರೆದಾಗ ಹಝ್ರತ್ ಪೈಗಂಬರ್(ಸ) ಹೇಳಿದರು **ಮನ್ ರಜುಲುಯಿಶ್‌ರಿ ಲನಾ ನಫ್ಸಹೂ–** ನಮಗಾಗಿ ತನ್ನನ್ನು ತಾನು ಮಾರಿಕೊಳ್ಳುವವರು ಯಾರು? ಆದ್ದರಿಂದ ಝಿಯಾದ್ ಬಿನ್ ಸಕನ್ ಐದು ಅನ್ಸಾರಿ ಸಹಚರರೊಂದಿಗೆ ಎದ್ದು ನಿಂತರು ಮತ್ತು ಕೆಲವರು ಹೇಳುತ್ತಾರೆ ಅವರು ಉಮಾರಾ ಯಝೀದ್ ಬಿನ್ ಸುಕನ್ ಆಗಿದ್ದರು ಎಂದು. ಇವರು ಹಝ್ರತ್ ಪೈಗಂಬರ್(ಸ)ರ ಮುಂದೆ ಶೌರ್ಯವನ್ನು ತೋರಿಸುತ್ತಾ ಒಬ್ಬೊಬ್ಬರಾಗಿ ಶಹೀದ್ ಆಗುತ್ತಲೇ ಇದ್ದರು, ಅವರಲ್ಲಿ ಕೊನೆಯವರು ಝಿಯಾದ್ ಅಥವಾ ಅಮರಾ ಆಗಿದ್ದರು. ಇವರು ಅನೇಕ ಗಾಯಗಳನ್ನು ಪಡೆಯುವವರೆಗೂ ಹೋರಾಟವನ್ನು ಮುಂದುವರೆಸಿದರು, ನಂತರ ಮುಸ್ಲಿಮರ ಗುಂಪು ಹಿಂತಿರುಗಿ ಅವಿಶ್ವಾಸಿಗಳನ್ನು ಹಝ್ರತ್ ಪೈಗಂಬರ್(ಸ) ಅವರಿಂದ ದೂರ ತಳ್ಳಿದರು, ನಂತರ ಹಝ್ರತ್ ಪೈಗಂಬರ್(ಸ)ರು ಹೇಳಿದರು: ಝಿಯಾದ್ ಬಿನ್ ಸಕನ್ ಅವರನ್ನು ನನ್ನ ಹತ್ತಿರಕ್ಕೆ ತನ್ನಿ, ನಂತರ ಹಝ್ರತ್ ಪೈಗಂಬರ್(ಸ) ಅವರ ಸಹಚರರು ಅವರನ್ನು ಹಝ್ರತ್ ಪೈಗಂಬರ್(ಸ)ರ ಹತ್ತಿರಕ್ಕೆ ತಂದರು. ಹಝ್ರತ್ ಪೈಗಂಬರ್(ಸ)ಅವರು ತಮ್ಮ ಅನುಗ್ರಹದಾಯಕ ಪಾದವನ್ನು ಅವರಿಗೆ ದಿಂಬಿನನ್ನಾಗಿ ಮಾಡಿದರು ಮತ್ತು ಅವರ ಮುಖವು ಹಝ್ರತ್ ಪೈಗಂಬರ್(ಸ)ರ ಅನುಗ್ರಹದಾಯಕ ಪಾದಗಳ ಮೇಲೆ ಇರುವ ಸ್ಥಿತಿಯಲ್ಲಿ ಮರಣಹೊಂದಿದರು. ಅವರ ಶರೀರಕ್ಕೆ ಹದಿನಾಲ್ಕು ಗಾಯಗಳು ಆಗಿದ್ದವು. (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ–4, ಪುಟ–203, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಈ ಘಟನೆಗಳಲ್ಲಿ ಕೆಲವನ್ನು ಹಿಂದೆ ಕೂಡ ಹೇಳಿದ್ದೇನೆ. ಕೆಲವಲ್ಲಿ ಏನಾದರೂ ಹೊಸ ಸಂಗತಿಗಳು ಇರುತ್ತವೆ, ಏನಾದರೂ ಕೆಲವು ಹೊಸ ವಾಕ್ಯಗಳು ಇರುತ್ತವೆ. ಸ್ವಲ್ಪ ವಿಭಿನ್ನವಾದ ಶೈಲಿಯಾಗಿರುತ್ತದೆ. ಆದ್ದರಿಂದ ಪುನಃ ವಿವರಿಸುತ್ತಿದ್ದೇನೆ.

ಹಝ್ರತ್ ಪೈಗಂಬರ್(ಸ) ಅವರು ಉಹದ್‌ನಿಂದ ಮದೀನಾಗೆ ಹಿಂದಿರುಗಿದ ಬಗ್ಗೆ ಹದೀಸ್‌ಗಳಲ್ಲಿ ಉಹದ್ ಯುದ್ಧದ ದಿನದಂದು ಉಹದ್‌ನ ಶಹೀದರನ್ನು ದಫನ್ ಮಾಡಿದ ನಂತರ ಹಝ್ರತ್ ಪೈಗಂಬರ್(ಸ) ಅವರು ಮದೀನಾಗೆ ಮರಳಿದರು ಎಂದು ಉಲ್ಲೇಖಿಸಲಾಗಿದೆ.

(ದಾಏರಾ ಮಾರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್(ಸ), ಸಂಪುಟ–7, ಪುಟ–55, ಪ್ರಕಾಶಕ ಬಜ್ಮ್ ಇಕ್ಬಾಲ್, ಲಾಹೋರ್) (ಸಬ್ಲುಲ್ ಹುದಾ ವರ್‍ರಶ್ಶಾದ್, ಸಮಘುಟ–4, ಪುಟ–227, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಮತ್ತು ಮದೀನಾದಲ್ಲಿ ಮಗ್ರಿಬ್ ನಮಾಝನ್ನು ನಿರ್ವಹಿಸಲಾಯಿತು ಎಂದು ಸಹ ಉಲ್ಲೇಖಿಸಲಾಗಿದೆ. ಹೀಗಾಗಿ, ಹಝ್ರತ್ ಬಿಲಾಲ್(ರ) ಅವರು ಉಹುದ್ ಕ್ಷೇತ್ರದಿಂದ ಮದೀನಾಗೆ ಹಿಂದಿರುಗಿದಾಗ ನಮಾಝ್‌ಗೆ ಅಝಾನ್ ನೀಡಿದರು ಎಂದು ಲೇಖಕರೊಬ್ಬರು ಬರೆದಿದ್ದಾರೆ. ನಮಾಝನ್ನು ನಿರ್ವಹಿಸಲು, ಹಝ್ರತ್ ಪೈಗಂಬರ್(ಸ)ರು ಹಝ್ರತ್ ಸಅದ್ ಬಿನ್ ಉಬಾದಾ(ರ) ಮತ್ತು ಸಅದ್ ಬಿನ್ ಮುಆದ್(ರ) ಅವರ ಸಹಾಯದಿಂದ ಮಸೀದಿಗೆ ಬಂದರು. ನಮಾಝನ್ನು ನಿರ್ವಹಿಸಿದ ನಂತರ, ಹಝ್ರತ್ ಪೈಗಂಬರ್(ಸ) ಅವರು ಮನೆಗೆ ತೆರಳಿದರು. ಇಶಾ ನಮಾಝಿನ ಸಮಯ ಬಂದಾಗ, ಹಝ್ರತ್ ಬಿಲಾಲ್(ರ) ಅವರು ಅಧಾನ್ ಅನ್ನು ಮತ್ತೆ ನೀಡಿದರು, ಆದರೆ ಹಝ್ರತ್ ಪೈಗಂಬರ್(ಸ)ರು ನಿದ್ರೆಯ ಕಾರಣದಿಂದ ಹಾಜರಾಗಲು ಸಾಧ್ಯವಾಗಲಿಲ್ಲ. ಅವರು ವಿಶ್ರಾಂತಿ ಪಡೆಯುತ್ತಿದ್ದರು ಮತ್ತು ನಿದ್ರಿಸುತ್ತಿದ್ದರು, ಆದ್ದರಿಂದ ಅವರು ಅಧಾನ್ ನಂತರ ನಮಾಝಿನ ಸಮಯಕ್ಕೆ ಬರಲು ಸಾಧ್ಯವಾಗಲಿಲ್ಲ. ಹಝ್ರತ್ ಬಿಲಾಲ್(ರ.ಅ) ಹಝ್ರತ್ ಪೈಗಂಬರ್(ಸ)ರ ಬಾಗಿಲಲ್ಲಿ ಅವರಿಗಾಗಿ ಕಾಯುತ್ತಿದ್ದರು. ಅವರು ಹಿಂತಿರುಗಿ ಬಂದು ಪ್ರಾರ್ಥನೆಯನ್ನು ನಡೆಸಿದರು ಎಂದಲ್ಲ, ಬದಲಿಗೆ ಅವರಿಗಾಗಿ ಕಾಯುತ್ತಾ ಕುಳಿತರು. ರಾತ್ರಿಯ ಸಾಕಷ್ಟು ಸಮಯ ಕಳೆದ ನಂತರ, ಹಝ್ರತ್ ಬಿಲಾಲ್(ರ) ಹಝ್ರತ್ ಪೈಗಂಬರ್(ಸ) ರನ್ನು ಕರೆದರು. ಹಝ್ರತ್ ಪೈಗಂಬರ್(ಸ) ನಮಾಝ್ ನಿರ್ವಹಿಸಲು ಬಂದಾಗ ಅವರ ಸ್ಥಿತಿ ಮೊದಲಿಗಿಂತ ಸ್ವಲ್ಪ ಉತ್ತಮವಾಗಿತ್ತು. ಇಶಾ ನಮಾಝನ್ನು ನಿರ್ವಹಿಸಿದ ನಂತರ, ಹಝ್ರತ್ ಪೈಗಂಬರ್(ಸ) ಅವರು ಮನೆಗೆ ತೆರಳಿದರು. ಹಝ್ರತ್ ಪೈಗಂಬರ್(ಸ)ರ ಸಹಚರರು ನಮಾಝಿನ ಸ್ಥಳದಿಂದ ಮನೆಯವರೆಗೆ ಸಾಲುಗಳಲ್ಲಿ ನಿಂತಿದ್ದರು. ಅವರಲ್ಲಿ, ಹಝ್ರತ್ ಪೈಗಂಬರ್(ಸ) ಅವರು ಒಬ್ಬರೇ ಮನೆಗೆ ಹೋದರು. ಈ ಬಾರಿ ಬೆಂಬಲ ಬೇಕಾಗಿರಲಿಲ್ಲ. ಮೊದಲು ಮಗ್ರಿಬ್ ನಮಾಝಿಗೆ ಬಂದಾಗ ಅವರು ಆಸರೆಯಿಂದ ಬಂದರು, ನಂತರ ವಿಶ್ರಾಂತಿ ಪಡೆದರು. ಇಶಾ ನಮಾಝನ್ನು ತಡವಾಗಿ ನಿರ್ವಹಿಸಲಾಯಿತು ಮತ್ತು ನಂತರ ಬರಲು ಅಥವಾ ಹೋಗ ಯಾವುದೇ ಬೆಂಬಲದ ಅಗತ್ಯವಿರಲಿಲ್ಲ. ಈ ಸಮಯದಲ್ಲಿ, ಕೆಲವು ಮಹಿಳೆಯರು ಹಝ್ರತ್ ಹಮ್‌ಝಾ(ರ) ಅವರಿಗಾಗಿ ಅಳುತ್ತಿರುವುದನ್ನು

ಕಂಡಾಗ ಹಝ್ರತ್ ಪೈಗಂಬರ್(ಸ)ರು ಹಾಗೆ ಮಾಡದಂತೆ ತಡೆದರು ಎಂದು ಹಿಂದಿನ ಖುತ್ಬ ಜುಮುಅದಲ್ಲಿ ಉಲ್ಲೇಖಿಸಲಾಗಿದೆ. ಅವರು (ಸ) ಮನೆಗೆ ಭೇಟಿ ನೀಡಿದಾಗ, ಕಾವಲುಗಾರರನ್ನು ಹೊರತುಪಡಿಸಿ, ಎಲ್ಲಾ ಪುರುಷರು ಮತ್ತು ಮಹಿಳೆಯರು ತಮ್ಮ ತಮ್ಮ ಮನೆಗಳಿಗೆ ತೆರಳಿದರು.

(ದಾಇರಾ ಮಾರಿಫ್ ಸೀರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್, ಸಂಪುಟ-7, ಪುಟ-63, ಬಝ್ಮೆ ಇಖ್ಬಾಲ್ ಲಾಹೋರ್)

ಈ ಬಗ್ಗೆ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ರವರು ಬರೆಯುತ್ತಾರೆ **"ಎಲ್ಲಾ ವ್ಯವಸ್ಥೆಗಳನ್ನು ಪೂರ್ಣಗೊಳಿಸಿದ ನಂತರ, ಹಝ್ರತ್ ಪೈಗಂಬರ್(ಸ) ಸಂಜೆಯ ಹೊತ್ತು ಮದೀನಕ್ಕೆ ತೆರಳಿದರು."** (ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ-502) ಅಂದರೆ ಎಲ್ಲಾ ಕೆಲಸ ಮುಗಿಯಿತು. ಗಾಯವಾದುದ್ದರಿಂದ ತಕ್ಷಣ ಮರಳಿದರು ಎಂದಲ್ಲ ಬದಲಿಗೆ ಎಲ್ಲ ಕೆಲಸವನ್ನೂ ಪೂರ್ಣಗೊಳಿಸಿದರು.

ಮದೀನದ ಮಹಿಳೆಯರ ಸಹನೆ ಮತ್ತು ಸಂತೃಪ್ತಿಯ ಮಾದರಿಗಳ ಬಗ್ಗೆ ಕೆಲವು ಉದಾಹರಣೆಗಳಿವೆ. ಇದರ ಬಗ್ಗೆ ಕಳೆದ ಜುಮುಅದಲ್ಲಿಯೂ ವಿವರಿಸಿದ್ದೇನೆ.

ಉಹುದ್ ಯುದ್ಧದ ನಂತರ ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಮರಳಿದಾಗ ಹಝ್ರತ್ ಮುಸ್‌ಅಬ್ ಬಿನ್ ಉಮೈರ್(ರ)ರ ಪತ್ನಿಯಾದ ಹಮ್ನ ಬಿನ್ತ್ ಜಹಶ್(ರ)ರಿಗೆ ಅವರ ಸಹೋದರ ಹಝ್ರತ್ ಅಬ್ದುಲ್ಲಾ ಬನ್ ಜಹಶ್(ರ) ಅವರ ಶಹಾದತ್ತಿನ ವಾರ್ತೆಯನ್ನು ತಿಳಿಸಿದರು ಅದಕ್ಕೆ ಅವರು **ಇನ್ನಾ ಲಿಲಲಾಹಿ ವ ಇನ್ನಾ ಇಲೈಹಿ ರಾಜಿಊನ್**ಎಂದು ಹೇಳಿ ಅವರ ಮಗ್‌ಫಿರತ್‌ಗಾಗಿ ದುಆ ಮಾಡಿದರು ಮತ್ತೆ ಜನರು ಅವರ ಮಾವ ಹಝ್ರತ್ ಹಮ್‌ಝಾ(ರ) ಅವರ ಶಹಾದತಿನ ವಾರ್ತೆಯನ್ನು ತಿಳಿಸಿದಾಗ ಅವರು **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಎಂದು ಹೇಳಿ ಅವರ ಮಗ್‌ಫಿರತ್‌ಗಾಗಿ ದುಆ ಮಢಿದರು. ತದನಂತರ ಜನರು ಅವರ ಪತಿ ಹಝ್ರತ್ ಮುಸ್‌ಅಬ್ ಬಿನ್ ಉಮೈರ್(ರ) ಅವರ ಶಹಾದತಿನ ಸುದ್ದಿ ತಿಳಿಸಿದಾಗ ಅವರು ಅಯ್ಯೋ ಎಂದು ಹೇಳಿ ಅಳಲಾರಂಭಿಸಿದರು. ಇದರ ಬಗ್ಗೆ ಹಝ್ರತ್ ಪೈಗಂಬರ್(ಸ)ರವರು ಪತ್ನಿಗೆ ಅವಳ ಪತಿಯ ಬಗ್ಗೆ ವಿಶೇಷ ಸ್ಥಾನಮಾನವಿರುತ್ತದೆ ಎಂದು ಹೇಳಿದರು. (ಸೀರತ್ ಇಬ್ನ್ ಹಿಶಾಮ್, ಪುಟ-396, ದಾರ್ ಇಬ್ನ್ ಹಜ್ಮ್, ಬೈರುತ್)

ಇನ್ನೊಂದು ಹದೀಸ್‌ನಲ್ಲಿ, ಹಝ್ರತ್ ಹಮ್ನ ಬಿಂತ್ ಜಹಶ್(ರ) ಅವರ ಬಗ್ಗೆ ಉಲ್ಲೇಖಿಸಲಾಗಿದೆ, ಅವರಿಗೆ ಜನರು ನಿಮ್ಮ ಸಹೋದರನು ಶಹೀದ್ ಆಗಿದ್ದಾನೆ ಎಂದು ತಿಳಿಸಿದಾಗ ಅವರು ಅಲ್ಲಾಹನು ಅವನ ಮೇಲೆ ಕರುಣಿಸಲಿ ಎಂದು ಹೇಳಿ **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಎಂದು ಹೇಳಿದರು. ತದನಂತರ ಜನರು ಅವರಿಗೆ ನಿಮ್ಮ ಪತಿಯೂ ಹುತಾತ್ಮರಾಗಿದ್ದಾರೆ ಎಂದು ತಿಳಿಸಿದಾಗ ಅವರು ಅಯ್ಯೋ ದೌರ್ಭಾಗ್ಯವೇ ಎಂದು ಹೇಳಿದರು. ಅದಕ್ಕೆ ಹಝ್ರತ್ ಪೈಗಂಬರ್(ಸ): ಮಹಿಳೆಯು ತನ್ನ ಪತಿಯೊಂದಿಗೆ ಬೇರೆಯವರೊಂದಿಗೆ ಇಲ್ಲದ ಸಂಬಂಧವನ್ನು ಹೊಂದಿರುತ್ತಾಳೆ ಎಂದು ಹೇಳಿದರು.

(ಸುನನ್ ಇಬ್ನ್ ಮಜಾ, ಕಿತಾಬ್ ಅಲ್-ಜನಾಎಝ್, ಅಧ್ಯಾಯ ಮಾ ಜಯ ಫಿ ಅಲ್-ಬಕಾ ಅಲಿ ಅಲ್-ಮಿಯಾತ್, ಹದೀಸ್-1590)

ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ತಮ್ಮ ಒಂದು ಸಂಬೋಧನೆಯಲ್ಲಿ ಹಝ್ರತ್ ಮುಸ್‌ಅಬ್ ಬಿನ್ ಉಮೈರ್(ರ) ಅವರ ಶಹಾದತ್ತಿನ ಘಟನೆಯನ್ನು ತಮ್ಮದೇ ಶೈಲಿಯಲ್ಲಿ ಉಲ್ಲೇಖಿಸಿದ್ದಾರೆ. ಅದರಲ್ಲಿ ಹಝ್ರತ್ ಮುಸ್‌ಅಬ್ ಬಿನ್ ಉಮೈರ್(ರ) ಅವರ ಶಹಾದತ್ತಿನ ಘಟನೆ ಮತ್ತು ಅವರ ಶಹಾದತ್ ಆದ ಮೇಲೆ ಅವರ ಪತ್ನಿಯ ಭಾವನೆಗಳನ್ನು ಉಲ್ಲೇಖಿಸಲಾಗಿದೆ. ಆ ಸಹಾಬಾಗಳು ಅಥವಾ ಸಹಾಬಿಯಾತ್‌ಗಳು (ಮಹಿಳೆ ಸಹಾಬಗಳು), ಅವರ ಸಂಬಂಧಿಕರ ಸಂಖ್ಯೆ ಒಂದಕ್ಕಿಂತ ಹೆಚ್ಚಾಗಿರುತ್ತಿದ್ದರೆ ಅವರಿಗೆ ಆಘಾತವು ಹೃದಯವನ್ನು ಆವರಿಸದ ರೀತಿಯಲ್ಲಿ ಮೆಲ್ಲ ಮೆಲ್ಲಗೆ ತಿಳಿಸುತ್ತಿದ್ದರು ಅಂದರೆ ಮೊದಲು ಒಬ್ಬರ ಬಗ್ಗೆ ನಂತರ ಇನ್ನೊಬ್ಬರ ಬಗ್ಗೆ ಕ್ರಮೇಣವಾಗಿ ತಿಳಿಸುತ್ತಿದ್ದರು. ಹೀಗೆ ಹಝ್ರತ್ ಪೈಗಂಬರ್(ಸ) ಅವರ ಬಳಿ ಹಝ್ರತ್ ಅಬ್ದುಲ್ಲಾ (ರ) ಅವರ ಸಹೋದರಿ ಹಮ್‌ನಾ ಬಿನ್ತ್ ಜಹಶ್(ರ) ಹಾಜರಾದಾಗ ಹಝ್ರತ್ ಪೈಗಂಬರ್(ಸ)ರವರು ಹೇಳೀದರು: ಓ ಹಮ್‌ನಾ! ನೀನು ತಾಳ್ಮೆ ವಹಿಸು ಸರ್ವಶಕ್ತನಾದ ಅಲ್ಲಾಹನು ನಿನಗೆ ತಕ್ಕ ಪ್ರತಿಫಲ ನೀಡುವನು. ಅದಕ್ಕೆ ಅವರು ಹೇಳಿದರು ಯಾ ರಸೂಲಲ್ಲಾಹ್(ಸ)!! ಯಾವ ಪ್ರತಿಫಲ? ಅದಕ್ಕೆ ಹಝ್ರತ್ ಪೈಗಂಬರ್(ಸ) ನುಡಿದರು: ನಿಮ್ಮ ಮಾವ ಹಮ್‌ಝಾ(ರ) ಅವರಿಗೆ. ಆಗ ಹಝ್ರತ್ ಹಮ್‌ನಾ(ರ) ಹೇಳಿದರು, **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಘಫರಲಹೂ ವ ರಹ್‌ಮಹೋ ಹನಿಯ್ಯನ್ ಲಹೂಶ್ಶಹಾದಹ್**. ಅಲ್ಲಾಹನು ಅವರನ್ನು ಕ್ಷಮಿಸಲಿ ಮತ್ತು ಅವರ ಮೇಲೆ ಕರುಣೆಯನ್ನು ತೋರಿಸಲಿ, ತದನಂತರ, ಹಝ್ರತ್ ಪೈಗಂಬರ್(ಸ) ಹೇಳಿದರು, ಓ ಹಮ್‌ನಾ! ತಾಳ್ಮೆಯಿಂದಿರಿ ಮತ್ತು ದೇವರಿಂದ ಪ್ರತಿಫಲವನ್ನು ನಿರೀಕ್ಷಿಸಿ. ಅವರು ಹೇಳಿದರು, ಇದು ಯಾರ ಪ್ರತಿಫಲ? ಹಝ್ರತ್ ಪೈಗಂಬರ್(ಸ) ಹೇಳಿದರು ನಿನ್ನ ಸಹೋದರ ಅಬ್ದುಲ್ಲಾ(ರ) ಬಗ್ಗೆ. ಅದಕ್ಕೆ ಮತ್ತೆ ಹಮ್‌ನಾ ಹೇಳಿದರು, **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಗಫರಲಹೂ ವ ರಹ್‌ಮಹೂ ಹನಿಯ್ಯನ್ ಲಹೂಶ್ಶಹಾದಹ್**. ತದನಂತರ ಹಝ್ರತ್ ಪೈಗಂಬರ್(ಸ) ಹೇಳಿದರು, ಓ ಹಮ್‌ನಾ, ತಾಳ್ಮೆಯಿಂದಿರಿ ಮತ್ತು ದೇವರಿಂದ ಪ್ರತಿಫಲವನ್ನು ನಿರೀಕ್ಷಿಸಿ. ಅವರು ಹೇಳಿದರು, ಹುಝೂರ್, ಇದು ಯಾರಿಗಾಗಿ? ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು ಇದು ಮುಸ್‌ಅಬ್ ಬಿನ್ ಉಮೈರ್‌ಗಾಗಿ. ಅದಕ್ಕೆ ಅವರು ಅಯ್ಯೋ ಎಂದು ಹೇಳಿ ಅಳಲಾರಂಭಿಸಿದರು. ಅವರು ಅಸಮಾಧಾನಗೊಂಡರು ಹಾಗೂ ಖೇದವನ್ನು ಪ್ರಕಟಿಸಿದರು. ನೀವೇಕೆ ಹೀಗೆ ಮಾಡಿದ್ದೀರಿ ಎಂದು ಅವರೊಡನೆ ಕೇಳಲಾದಾಗ, ಹಝ್ರತ್ ಹಮ್‌ನ ಹೇಳಿದರು: ನಾನು ಕೇವಲ ನನ್ನ ಪತಿಗಾಗಿ ಅಯ್ಯೋ ಎಂದು ಹೇಳಿದೆ. ಏಕೆಂದರೆ ನನಗೆ ಅವರ ಮಕ್ಕಳು ಅನಾಥರಾಗಿರುವುದು ನೆನಪಿಗೆ ಬಂದಿತ್ತು. ಆದ್ದರಿಂದ ನಾನು ಚಿಂತಿತಳಾದೆ. ಚಿಂತಿತಳಾದ ಸ್ಥಿತಿಯಲ್ಲಿ ನನ್ನ ನಾಲಗೆಯಿಂದ ಈ ಪದ ಹೊರಟಿತು. ಇದನ್ನು ಆಲಿಸಿದಾಗ ಹಝ್ರತ್ ಪೈಗಂಬರ್(ಸ) ಮುಸ್‌ಅಬ್(ರ)ರ ಮಕ್ಕಳಿಗಾಗಿ ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ಅವರ ಪಾಲಕರು ಮತ್ತು ಹಿರಿಯರು ಅವರೊಂದಿಗೆ ವಾತ್ಸಲ್ಯ ಮತ್ತು ಅನುಕಂಪ ತೋರಿಸುವವರಾಗಲಿ ಹಾಗೂ ಅವರೊಂದಿಗೆ ಉತ್ತಮವಾಗಿ ವರ್ತಿಸುವವರಾಗಲಿ.

(ಖುತ್‌ಬಾತೆ ತಾಹಿರ್ ಖಬ್ಲ್ ಅಝ್ ಖಿಲಾಫತ್, ಪುಟ-363)

ನಾನು ಕಳೆದ ಖುತ್ಬ ಜುಮುಅದಲ್ಲಿ ಹಝ್ರತ್ ಹಿಂದ್(ರ) ಅವರ ಬಗ್ಗೆ ಉಲ್ಲೇಖಿಸಿದ್ದೇನೆ. ಅವರ ಹಝ್ರತ್ ಪೈಗಂಬರ್(ಸ) ರ ಮೇಲಿನ ಪ್ರೀತಿ ಮತ್ತು ವಾತ್ಸಲ್ಯ ಮತ್ತು ಸರ್ವಶಕ್ತನಾದ ಅಲ್ಲಾಹನ ಸಂತೃಪ್ತಿಯನ್ನು ಗಳಿಸುವ ಬಗ್ಗೆ ಹೀಗೆ ವರದಿ ಇದೆ, ಅವರ ಪತಿ, ಸಹೋದರ ಮತ್ತು ಪುತ್ರನ ಶಹಾದತ್ ಬಗ್ಗೆ ಅವರಿಗೆ ತಿಳಿದಾಗ ಅವರು ಮೂರೂ ಶಹೀದರನ್ನು ಮೊದಲು ಮದೀನಕ್ಕೆ ಕರೆತರುತ್ತಿದ್ದರು, ಆದರೆ ನಂತರ ಅವರನ್ನು ಮರಳಿ ಕರೆದೊಯ್ದರು. ಮತ್ತು ಉಹುದ್‌ನ ಶಹೀದ್‌ರನ್ನು ಉಹುದ್‌ನಲ್ಲಿ ದಫನ್ ಮಾಡಬೇಕೆಂಬುದು ಸರ್ವಶಕ್ತನಾದ ಅಲ್ಲಾಹನ ಇಚ್ಛೆಯಾಗಿದೆ ಎಂದು ವಿವರವಾಗಿ ವಿವರಿಸಲಾಗಿದೆ.

ಇಲ್ಲಿಯ ವರೆಗೆ ಮೋದಲೇ ಹೇಳಲಾಗಿದೆ. ಉಹುದ್‌ನ ಸುದ್ದಿ ಪಡೆಯಲು ಹೊರಟಿದ್ದ ಹಝ್ರತ್ ಆಯಿಷಾ(ರ) ಅವರು ಉಹದ್‌ನಿಂದ ಬರುತ್ತಿದ್ದ ಹಝ್ರತ್ ಹಿಂದ್(ರ) ಅವರಲ್ಲಿ ಉಹುದ್‌ನ ಪರಿಸ್ಥಿತಿಯ ಬಗ್ಗೆ ವಿಚಾರಿಸಿದರು ಅದಕ್ಕೆ ಹಝ್ರತ್ ಹಿಂದ್(ರ) ಹೇಳಿದರು ಹಝ್ರತ್ ಪೈಗಂಬರ್(ಸ)ರವರು ಯೋಗಕ್ಷೇಮವಾಗಿದ್ದರೆ ಅವರ ನಂತರ ಎಲ್ಲಾ ತೊಂದರೆಗಳೂ ಸುಲಭವಾಗಿವೆ. ಅದರ ನಂತರ, ಹಝ್ರತ್ ಹಿಂದ್(ರ) ಈ ಆಯತ್ ಅನ್ನು ಪಠಿಸಿದರು **ವರದ್ದಲ್ಲಾಹುಲ್ಲಝೀನ ಕಫರೂ ಬಿಗೈಝಿಹಿಮ್ ಲಮ್ ಯನಾಲೂ ಖೈರನ್- ವ ಕಫಾ ಅಲ್ಲಾಹುಲ್‌ಮುಮಿನೀನಲ್ ಖಿತಾಲ- ವಕಾನಲ್ಲಾಹು ಖವಿಯ್ಯನ್ ಅಝೀಝಾ** (ಅಲ್‌ಅಹ್‌ಝಾಬ್: 26) ಅಂದರೆ: ಅವಿಶ್ವಾಸಿಗಳನ್ನು ಅವರ ಕೋಪದೊಂದಿಗೆಯೇ ಅಲ್ಲಾಹನು ಮರಳಿಸಿದನು. ಅವರು ಒಳಿತನ್ನೇನೂ ಗಳಿಸಲಿಲ್ಲ. ಯುದ್ಧದಲ್ಲಿ ವಿಶ್ವಾಸಿಗಳಿಗೆ ಅಲ್ಲಾಹನು ಸಾಕು.ಅಲ್ಲಾಹನು ಶಕ್ತಿವಂತನೂ ಪ್ರತಾಪಶಾಲಿಯೂ ಆಗಿದ್ದಾನೆ.

ಹಝ್ರತ್ ಆಯಿಷಾ(ರ) ಅವರು ಒಂಟೆಯ ಮೇಲೆ ಯಾರಿದ್ದಾರೆ? ಎಂದು ಕೇಳಿದರು. ಆಗ ಹಝ್ರತ್ ಹಿಂದ್(ರ) ಹೇಳೀದರು ನನ್ನ ಸಹೋದರ, ನನ್ನ ಪುತ್ರ ಖಲ್ಲಾದ್ ಹಾಗೂ ನನ್ನ ಪತಿ ಅಮ್ರೊ ಬಿನ್ ಜಮೂಹ್ ಇದ್ದಾರೆ. ಹಝ್ರತ್ ಆಯಿಷಾ(ರ) ಅವರಿಗೆ ಕೇಳಿದರು ಇವರನ್ನು ನೀನು ಎಲ್ಲಿಗೆ ಕರೆದುಕೊಂಡು ಹೋಗುತ್ತಿದ್ದೀಯ? ಅದಕ್ಕೆ ಅವರು ಹೇಳಿದರು ಇವರನ್ನು ಮದೀನಕ್ಕೆ ದಫನ್ ಮಾಡಲು ಕಡೆದುಕೊಂಡು ಹೋಗುತ್ತಿದ್ದೇನೆ. ನಂತರ ಅವರು ಆ ಒಂಟೆಯನ್ನು ಓಡಿಸಲು ಪ್ರಾರಂಭಿಸಿದರು, ಆದರೆ ಆ ಒಂಟೆ ನೆಲದ ಮೇಲೆ ಕುಳಿತುಕೊಂಡಿತು. ಹಝ್ರತ್ ಆಯಿಷಾ(ರ) ಹೇಳಿದರು ಇದರ ಮೇಲೆ ಭಾರವಿದೆ. ಅದಕ್ಕೆ ಹಝ್ರತ್ ಹಿಂದ್(ರ) ಹೇಳಿದರು ಇದು ಎರಡು ಒಂಟೆಗಳಷ್ಟು ಭಾರವನ್ನು ಹೊತ್ತಬಹುದು ಆದರೆ ಈ ಸಮಯದಲ್ಲಿ ಅದು ಸಂಪೂರ್ಣವಾಗಿ ಹಿಮ್ಮುಖವಾಗುತ್ತಿದೆ. ನಂತರ ಅವರು ಒಂಟೆಯನ್ನು ಗದರಿಸಿದಾಗ ಅದು ಎದ್ದು ನಿಂತಿತು. ಅವರು ಆ ಒಂಟೆ ಹೋಗುವ ದಿಕ್ಕನ್ನು ಮದೀನದ ಕಡೆಗೆ ಮಾಡಲಾಗುವಾಗ ಅದು ಕುಳಿತುಕೊಳ್ಳುತ್ತಿತ್ತು ಮತ್ತು ಒಂಟೆ ಹೋಗುವ ದಿಕ್ಕನ್ನು ಉಹುದಿನ ಕಡೆಗೆ ಮಾಡಲಾಗುವಾಗ ಅದು ಬೇಗಬೇಗನೇ ಹೋಗುತ್ತಿತ್ತು. ಹಝ್ರತ್ ಹಿಂದ್(ರ) ರಸೂಲುಲ್ಲಾಹ್(ಸ)ರ ಬಳಿಗೆ

ಹೋದರು ಮತ್ತು ಅವರಿಗೆ ಇದರ ಬಗ್ಗೆ ತಿಳಿಸಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಇದು ನಿಯೋಜಿತ ಒಂಟೆಯಾಗಿದೆ. ಎಂದರೆ, ಇದು ಮದೀನದ ಕಡೆಗೆ ಹೋಗದಂತೆಯೂ ಮತ್ತು ಉಹುದಿನ ಕಡೆಗೆ ಹೋಗುವಂತೆಯೂ ಅಲ್ಲಾಹನು ಮಾಡಿದ್ದಾನೆ. ಹಝ್ರತ್ ಪೈಗಂಬರ್(ಸ) ಕೇಳಿದರು: ಯುದ್ಧಕ್ಕೆ ಹೋಗುವುದಕ್ಕೆ ಮುಂಚಿತವಾಗಿ ನಿನ್ನ ಪತಿ ಏನಾದರೂ ಹೇಳಿದ್ದರೇ? ಹಝ್ರತ್ ಹಿಂದ್(ರ) ಹೇಳಿದರು: ಅವರು ಉಹುದಿನ ಕಡೆಗೆ ಹೊರಡುವಾಗ ಖಿಬ್ಲದ ದಿಕ್ಕಿಗೆ ಮುಖ ಮಾಡಿಕೊಂಡು ಹೀಗೆ ಹೇಳಿದ್ದರು: ಹೇ ಅಲ್ಲಾಹ್, ನನ್ನನ್ನು ನನ್ನ ಕುಟುಂಬದ ಕಡೆಗೆ ಲಜ್ಜಿತನಾಗಿ ಮರಳಿಸಬೇಡ ಮತ್ತು ನನಗೆ ಶಹಾದತಿನ ಸೌಭಾಗ್ಯವನ್ನು ದಯಪಾಲಿಸು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಒಂಟೆ ಹೋಗದಿರಲು ಕಾರಣ ಇದೇ ಆಗಿದೆ. ಹೇ ಅನ್ಸಾರ್ ಸಮೂಹವೇ, ನಿಮ್ಮಲ್ಲಿ ಕೆಲವು ಸಜ್ಜನರು ಇರುವರು. ಅವರು ಅಲ್ಲಾಹನ ಆಣೆ ಹಾಕಿ ಏನಾದರೂ ಹೇಳಿದರೆ ಅಲ್ಲಾಹನು ಅವರ ಆ ಮಾತನ್ನು ಖಂಡಿತವಾಗಿಯೂ ಪೂರೈಸುವನು. ಅಮ್ರ್ ಬಿನ್ ಜಮೂಹ್ ಕೂಡ ಅವರಲ್ಲಿ ಒಬ್ಬರಾಗಿರುವರು. ನಂತರ ಅವರು(ಸ) ಅಮ್ರ್ ಬಿನ್ ಜಮುಹ್ ಅವರ ಪತ್ನಿಗೆ ಹೇಳಿದರು. ಓ ಹಿಂದ್! ನಿನ್ನ ಸಹೋದರನು ಶಹೀದ್ ಆದನಿಂದಿಲೂ ದೇವದೂತರು ಅವನ ಮೇಲೆ ನೆರಳು ಮಾಡುತ್ತಿದ್ದಾರೆ ಮತ್ತು ಅವನನ್ನು ಎಲ್ಲಿ ದಫನ್ ಮಾಡಬೇಕು ಎಂದು ಕಾಯುತ್ತಿದ್ದಾರೆ. ಹಝ್ರತ್ ಪೈಗಂಬರ್(ಸ) ರವರು ಈ ಶಹೀದರರ ತದ್‌ಫೀನ್ ವರೆಗೆ ಅಲ್ಲಿಯೇ ಇದ್ದರು. ನಂತರ ಅವರು(ಸ) ಹೇಳಿದರು, ಓ ಹಿಂದ್! ಅಮ್ರ್ ಬಿನ್ ಜಮುಹ್, ನಿಮ್ಮ ಪುತ್ರ ಖಲ್ಲಾದ್ ಮತ್ತು ನಿಮ್ಮ ಸಹೋದರ ಅಬ್ದುಲ್ಲಾ ಸ್ವರ್ಗದಲ್ಲಿ ಸ್ನೇಹಿತರಾಗಿದ್ದಾರೆ. ಅದಕ್ಕೆ ಹಿಂದ್ ಕೇಳಿದರು, ಯಾ ರಸೂಲಲ್ಲಾಹ್(ಸ)! ನನಗಾಗಿಯೂ ಪ್ರಾರ್ಥಿಸಿ, ಅಲ್ಲಾಹನು ನನ್ನನ್ನು ಅವರ ಸಹವಾಸಕ್ಕೆ ಸೇರಿಸಲಿ.
(ಕಿತಾಬುಲ್-ಮಘಾಜಿ, ಸಂಪುಟ-1, ಪುಟಗಳು 232-233, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಸಅದ್ ಬಿನ್ ಅಬೀ ವಖಾಸ್(ರ) ವರದಿ ಮಾಡುತ್ತಾರೆ ಹಝ್ರತ್ ಪೈಗಂಬರ್(ಸ) ಬನೂ ದೀನಾರ್‌ನ ಓರ್ವ ಮಹಿಳೆಯ ಬಳಿಯಿಂದ ಹಾದುಹೋದರು ಆಕೆಯ ಪತಿ, ಸಹೋದರ ಮತ್ತು ತಂದೆ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಉಹುದ್ ಯುದ್ಧದಲ್ಲಿ ಭಾಗವಹಿಸಿದ್ದರು ಮತ್ತು ಅವರೆಲ್ಲರು ಶಹೀದ್ ಆಗಿದ್ದರು. ಆ ಮಹಿಳೆಗೆ ಹಝ್ರತ್ ಪೈಗಂಬರ್(ಸ)ರವರು ಸಂತಾಪ ಸೂಚಿಸಿದಾಗ, ಆಕೆ ಹಝ್ರತ್ ಪೈಗಂಬರ್(ಸ)ರವರ ಸ್ಥಿತಿ ಹೇಗಿದೆ? ಎಂದು ಕೇಳಿದಾಗ ಅವರು(ಸ) ಅಲ್‌ಹಮ್‌ದುಲಿಲ್ಲಾಹ್ ಚೆನ್ನಾಗಿದ್ದಾರೆ ಎಂದು ಜನರು ಹೇಳಿದರು. ನಂತರ ಆ ಮಹಿಳೆ ಹೇಳಿದಳು ನಾನು ಹಝ್ರತ್ ಪೈಗಂಬರ್(ಸ) ನೋಡಲು ಬಯಸಿತ್ತೇನೆ ನನಗೆ ತೋರಿಸಿ, ಅದಕ್ಕೆ ಆಕೆಗೆ ಹಝ್ರತ್ ಪೈಗಂಬರ್(ಸ) ಇಲ್ಲಿದ್ದಾರೆ ಎಂದು ತೋರಿಸಿದರು. ಆಕೆ ಹಝ್ರತ್ ಪೈಗಂಬರ್(ಸ) ಅವರನ್ನು ನೋಡಿದಾಗ, ಅವರ ನಂತರ ಪ್ರತಿ ತೊಂದರೆಯೂ ಚಿಕ್ಕದಾಗಿದೆ ಎಂದು ಹೇಳಿದಳು. (ಸೀರತ್ ಇಬ್ನ್ ಹಿಶಾಮ್, ಪುಟ-545, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಮತ್ತೊಂದು ವರದಿಯಲ್ಲಿ ಈ ಮಹಿಳೆಯ ಪುತ್ರನು ಶಹೀದ್ ಆಗಿರುವುದನ್ನು ಉಲ್ಲೇಖಿಸಲಾಗಿದೆ. ಹಝ್ರತ್ ಅನಸ್ ಬಿನ್ ಮಾಲಿಕ್(ರ) ಹೇಳುತ್ತಾರೆ: ಉಹುದ್ ಯುದ್ಧದ ಸಂದರ್ಭದಲ್ಲಿ, ಹಝ್ರತ್ ಪೈಗಂಬರ್(ಸ) ರವರು ಶಹೀದ್ ಆಗಿದ್ದಾರೆ ಎಂಬ ವದಂತಿ ಹರಡಿದ್ದರಿಂದ ಮದೀನಾದ ಜನರು ತುಂಬಾ ಆತಂಕಕ್ಕೊಳಗಾದರು. ಮದೀನಾದ ಬೀದಿಗಳಲ್ಲಿಯೂ ಶಹೀದ್ ಆದರು ಎಂದು ಕೂಗು ಕೇಳಿಬರುತ್ತಿತ್ತು, ಅನ್ಸಾರಿ ಮಹಿಳೆಯೊಬ್ಬರು ಚಿಂತಿತರಾಗಿ ಮನೆಯಿಂದ ಹೊರಬಂದರು. ಆಕೆ ತನ್ನ ಮುಂದೆ ತನ್ನ ಸಹೋದರ, ಪುತ್ರ ಮತ್ತು ಪತಿಯ ಶವಗಳನ್ನು ನೋಡಿದಳು. ವರದಿಗಾರರು ಹೇಳುತ್ತಾರೆ, ಆಕೆಯು ಮೊದಲು ಯಾರನ್ನು ನೋಡಿದ್ದಾಳೆಂದು ನನಗೆ ತಿಳಿದಿಲ್ಲ, ಆದರೆ ಆಕೆ ಕೊನೆಯ ಮೃತದೇಹವನ್ನು ಹಾದುಹೋದಾಗ, ಇವರು ಯಾರು? ಎಂದು ಕೇಳಿದಳು. ಅದಕ್ಕೆ ಅಲ್ಲಿದ್ದ ಜನರು ಇವರು ನಿಮ್ಮ ಸಹೋದರ, ನಿಮ್ಮ ಪತಿ ಮತ್ತು ನಿಮ್ಮ ಮಗ ಎಂದು ಹೇಳಿದರು. ಆಕೆ ಹಝ್ರತ್ ಪೈಗಂಬರ್(ಸ) ಹೇಗಿದ್ದಾರೆ? ಎಂದು ಪ್ರಶ್ನಿಸಿದಳು. ಅದಕ್ಕೆ ಜನರು ಅವರು ಮುಂದಿದ್ದಾರೆ ಎಂದು ಹೇಳಿದರು. ಆ ಮಹಿಳೆ ನಡೆದುಕೊಂಡು ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋಗಿ ಅವರನ್ನು ಹಿಡಿದು ಹೇಳಿದಳು:

ಯಾ ರಸೂಲಲ್ಲಾಹ್(ಸ)! ನನ್ನ ತಂದೆ ತಾಯಿಗಳು ನಿಮಗೆ ಅರ್ಪಿತವಾಗಲಿ. ನೀವು ಸುರಕ್ಷಿತವಾಗಿದ್ದಾಗ, ನಾನು ಯಾವುದೇ ಹಾನಿಯ ಬಗ್ಗೆ ಚಿಂತಿಸುವುದಿಲ್ಲ. (ಮುಜಮುಲ್ ಔಸತ್, ಸಂಪುಟ-5, ಪುಟ-329-330, ಹದೀಸ್-7499, ದಾರುಲ್ ಫಿಕರ್ ಬೈರುತ್)

ಒಂದು ಮಾತಿನ ಪ್ರಕಾರ, ಈ ಮಹಿಳೆಯ ಹೆಸರು ಸುಮೈರಾ ಬಿಂತ್ ಖೈಸ್ ಎಂದಾಗಿತ್ತು, ಅವರು ನುಮಾನ್ ಬಿನ್ ಅಬ್ದ್ ಅಮ್ರೋ ಅವರ ತಾಯಿಯಾಗಿದ್ದರು. (ಕಿತಾಬುಲ್ ಮಘಾಝಿ, ಸಂಪುಟ-1, ಪುಟ-251, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಮುಸ್ಲೆಹ್ ಮೌಊದ್(ರ) ಈ ಘಟನೆಯನ್ನು ಒಂದು ಸಂದರ್ಭದಲ್ಲಿ ಈ ರೀತಿ ಉಲ್ಲೇಖಿಸಿದ್ದಾರೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಸಹಾಬರ ಈ ಶೌರ್ಯದ ಅನೇಕ ಉದಾಹರಣೆಗಳಿವೆ. ಲೌಕಿಕ ಜನರಲ್ಲಿ, ಲಕ್ಷಾಂತರ ಜನರಲ್ಲಿ ಮತ್ತು ನೂರಾರು ದೇಶಗಳಲ್ಲಿ, ಇದಕ್ಕೆ ಒಂದೆರಡು ಉದಾಹರಣೆಗಳನ್ನು ಕಾಣಬಹುದು, ಆದರೆ ಸಹಾಬೀಯರಲ್ಲಿ ಅದು ಕೆಲವು ಸಾವಿರ ಸಹಾಬೀಯರಲ್ಲಿ, ನೂರಾರು ಉದಾಹರಣೆಗಳು ಕಂಡುಬರುತ್ತವೆ. ಒಳ್ಳೆಯದು, ಇದು ಇತರರಲ್ಲಿ ಕಂಡುಬರುತ್ತದೆ, ಆದರೆ ಕೋಟ್ಯಾಂತರಲ್ಲಿ ಒಂದೆರಡು ಉದಾಹರಣೆಗಳಿರುತ್ತವೆ ಆದರೆ ಇಲ್ಲಿ, ಸಾವಿರಾರು ಉದಾಹರಣೆಗಳಿವೆ. ಮಹಿಳೆಗೆ ಸೇರಿರುವ ಇದು ಎಂತಹ ಉನ್ನತ ಉದಾಹರಣೆಯಾಗಿದೆ.

ಮತ್ತೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಾನು ಇದನ್ನು ಹಲವು ಬಾರಿ ಹೇಳಿದ್ದೇನೆ ಮತ್ತು ಪ್ರತಿ ಸಭೆಯಲ್ಲೂ ತಿಳಿಸಲು ಯೋಗ್ಯವಾಗಿದೆ ಮತ್ತು ಅದರ ಸ್ಮರಣೆಯನ್ನು ತಾಜಾವಾಗಿ ಇಡಬೇಕು. ಕೆಲವು ಘಟನೆಗಳು ಎಷ್ಟು ಅದ್ಭುತವಾಗಿವೆ ಎಂದರೆ ಮತ್ತೆ ಮತ್ತೆ ಹೇಳಿದರೂ ಅವು ಹಳೆಯದಾಗುವುದಿಲ್ಲ. ಅಂತಹ ಘಟನೆಯು ಆ ಮಹಿಳೆಯದ್ದಾಗಿದೆ ಆಕೆ ಉಹುದ್ ಯುದ್ಧದ ಸಂದರ್ಭದಲ್ಲಿ ಮದೀನಾದಲ್ಲಿ ಹಝ್ರತ್ ಪೈಗಂಬರ್(ಸ)ರು ಶಹೀದ್ ಆಗಿದ್ದಾರೆ ಎಂಬ ಸುದ್ದಿಯನ್ನು ಕೇಳಿದ ನಂತರ ಇತರೆ ಮಹಿಳೆಯರೊಂದಿಗೆ ಗಾಬರಿಯಾಗಿ ಹೊರಬಂದಳು ಉಹುದ್ ನಿಂದ ಹಿಂದಿರುತ್ತಿದ್ದ ಮೊದಲ ಸವಾರನನ್ನು ಕಂಡು ಆಕೆ ಹಝ್ರತ್ ಪೈಗಂಬರ್(ಸ)ರವರ ಪರಿಸ್ಥಿತಿಯ ಬಗ್ಗೆ ವಿಚಾರಿಸಿದಳು ಆ ಸವಾರನು ಹಳೇಇದನು ನಿಮ್ಮ ಪತಿ ಶಹೀದ್ ಆಗಿದ್ದಾರೆ. ಅದಕ್ಕೆ ಆಕೆ ಹೇಳಿದಳು ನಾನು ನಿನಗೆ ರಸೂಲುಲ್ಲಾಹ್(ಸ)ರವರ ಬಗ್ಗೆ ಪ್ರಶ್ನಿಸಿರುವುದು ನೀನು ನನಗೆ ನನ್ನ ಪತಿಯ ಬಗ್ಗೆ ಹೇಳುತ್ತಿದ್ದೀಯ. ಅದಕ್ಕೆ ಆ ಸವಾರ ಹೇಳಿದನು ನಿಮ್ಮ ತಂದೆ ಕೂಡ ಶಹೀದ್ ವಾಗಿದ್ದಾರೆ ಆದರೆ ಆ ಮಹಿಳೆ ಹೇಳಿದಳು ನಾನು ನಿಮ್ಮಲ್ಲಿ ಹಝ್ರತ್ ಪೈಗಂಬರ್(ಸ)ರ ಬಗ್ಗೆ ಕೇಳುತ್ತಿರುವುದು ನೀನು ನನಗೆ ನನ್ನ ತಂದೆಯ ಬಗ್ಗೆ ಹೇಳುತ್ತಿದ್ದೀಯಾ. ಆ ಸವಾರನು ಹೇಳಿದನು ನಿಮ್ಮ ಇಬ್ಬರು ಸಹೋದರರೂ ಮೃತರಾಗಿದ್ದಾರೆ ಆದರೆ ಆ ಮಹಿಳೆ ಮತ್ತೆ ಅದೇ ಹೇಳಿದಳು ನೀನು ನನ್ನ ಪ್ರಶ್ನೆಗೆ ಉತ್ತರಿಸುತ್ತಿಲ್ಲ. ನಾನು ನನ್ನ ಸಂಬಂಧಿಕರ ಬಗ್ಗೆ ಪ್ರಶ್ನಿಸುತ್ತಿಲ್ಲ ನಾನು ಹಝ್ರತ್ ಪೈಗಂಬರ್(ಸ)ರ ಬಗ್ಗೆ ಕೇಳುತ್ತಿದ್ದೇನೆ. ಏಕೆಂದರೆ ಈ ಸಹಾಬಿಯ ಮನಸ್ಸು ತೃಪ್ತವಾಗಿತ್ತು ಮತ್ತು ಅವರು ಯೋಗಕ್ಷೇಮವಾಗಿದ್ದಾರೆ ಎಂದು ಅವರಿಗೆ ತಿಳಿದಿತ್ತು. ಆದ್ದರಿಂದ, ಅವರ ಪ್ರಕಾರ, ಈ ಮಹಿಳೆಗೆ ತನ್ನ ಸಂಬಂಧಿಕರ ಸಾವಿನ ಬಗ್ಗೆ ತಿಳಿಸುವುದು ಅತ್ಯಂತ ಮುಖ್ಯವಾದ ಪ್ರಶ್ನೆಯಾಗಿತ್ತು, ಆದರೆ ಈ ಮಹಿಳೆಗೆ ಅತ್ಯಂತ ಪ್ರಿಯವಾದದ್ದು ಹಝ್ರತ್ ಪೈಗಂಬರ್(ಸ)ರ ವ್ಯಕ್ತಿತ್ವ, ಹಾಗಾಗಿ ನನ್ನ ಪ್ರಶ್ನೆಗೆ ನೀವು ಉತ್ತರಿಸಿ ಎಂದು ಬಹಳ ಕಠೋರವಾಗಿ ಕೇಳಿದಳು. ಈ ಕುರಿತು ಅವರು ಹಝ್ರತ್ ಪೈಗಂಬರ್(ಸ.ಅ) ಆರೋಗ್ಯವಾಗಿದ್ದಾರೆ ಎಂದು ಹೇಳಿದರು. ಇದನ್ನು ಆಲಿಸಿ ಆ ಮಹಿಳೆ ನೀವು(ಸ) ಬದುಕಿರುವಾಗ, ಯಾರಾದರೂ ಕೊಲ್ಲಲ್ಪಟ್ಟರೂ ನನಗೆ ದುಃಖವಿಲ್ಲ ಎಂದು ಹೇಳಿದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಎರಡನೇ ಮಹಾಯುದ್ಧದಲ್ಲಿ ಜರ್ಮನಿಯ ಮುದುಕಿಯೊಬ್ಬಳ ಮಗ ಯುದ್ಧದಲ್ಲಿ ಕೊಲ್ಲಲ್ಪಟ್ಟಿದ್ದನು. ಆಕೆ ನಟನೆಗಾಗಿ ನಕ್ಕು ಪ್ರತಿಕ್ರಿಯಿಸಿದಳು. ನೋಡಿರಿ ಆಕೆ ಎಷ್ಟೊಂದು ಸಹನೆ ತೋರಿಸಿರುವಳು ಎಂಬುದಾಗಿ ಆ ದಿನಗಳಲ್ಲಿ ವಾರ್ತೆ ಬಂದಿತ್ತು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅವಳು ನಕ್ಕಿದ್ದು ನಿಜ, ಆದರೆ ಅದು ದುಃಖದ ಭಾರವನ್ನು ಅದುಮಿ ಪ್ರಕಟಿಸಿದ್ದು ಎಂದು ತೋರುತ್ತದೆ. ಎಂದರೆ ಒಳಗೊಳಗೆ ಆಕೆ ಅಳುತ್ತಿದ್ದಳು. ಆದರೆ ಸಹಾಬಿ ಸ್ತ್ರೀಯ ಘಟನೆಯಲ್ಲಿ ಅವರು ತಮ್ಮ ದುಃಖವನ್ನು ಅದುಮಿ ಒಳಗೊಳಗೆ ಅಳುತ್ತಿರಲಿಲ್ಲ. ಬದಲಾಗಿ ಹಝ್ರತ್ ಪೈಗಂಬರ್(ಸ) ಜೀವಂತವಾಗಿ ಇರುವರು ಎಂಬ ಕಾರಣದಿಂದ ಅವರು ಮನಸ್ಸಾರೆ ಸಂತೋಷದಲ್ಲಿದ್ದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಾನು ಆ ಸಹಾಬಿ ಸ್ತ್ರೀಯ ಘಟನೆಯನ್ನು ಓದುವಾಗ ನನ್ನ ಹೃದಯ ಅವರಿಗಾಗಿ ಗೌರವಾದರದಿಂದ ತುಂಬುತ್ತದೆ. ಆ ಪರಿಶುದ್ಧ ಸ್ತ್ರೀಯ ಸೆರಗನ್ನು ಸ್ಪರ್ಶಿಸಿ ಆ ಕೈಗಳನ್ನು ನನ್ನ ಕಣ್ಣುಗಳಿಗೆ ಸವರಬೇಕು ಎಂದು ನನ್ನ ಹೃದಯ ಬಯಸುತ್ತದೆ. ಏಕೆಂದರೆ ಆ ಸಹಾಬಿ ಸ್ತ್ರೀ ನನ್ನ ಪ್ರಿಯ ಪೈಗಂಬರ್(ಸ)ರಿಗಾಗಿ ತನ್ನ ಸ್ನೇಹದ ಅತುಲ್ಯವಾದ ಸ್ಮರಣೆಯನ್ನು ಬಿಟ್ಟುಹೋದರು. (ಖುತ್‌ಬಾತೆ ಮಹ್ಮೂದ್, ಸಂಪುಟ-10, ಪುಟ-542-543)

ನಂತರ, ಅದೇ ಪ್ರೀತಿ ಮತ್ತು ವಾತ್ಸಲ್ಯವನ್ನು ವಿವರಿಸುತ್ತಾ ಒಂದೆಡೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ನೋಡಿ! ಈ ಮಹಿಳೆಗೆ ಹಝ್ರತ್ ಪೈಗಂಬರ್(ಸ) ಅವರ ಮೇಲೆ ಎಷ್ಟು ಪ್ರೀತಿಯನ್ನು ಹೊಂದಿದ್ದರು. ತನ್ನ ತಂದೆ, ಸಹೋದರ ಮತ್ತು ಪುತ್ರಮ ಮರಣದ ಬಗ್ಗೆ ಜನರು ಒಂದರ ನಂತರ ಒಂದರಂತೆ ಅವರಿಗೆ ಹೇಳುತ್ತಿದ್ದರು, ಆದರೆ ಪ್ರತಿ ಬಾರಿಯೂ ಅವರು ಒಂದೇ ಮಾತನ್ನು ಹೇಳುತ್ತಿದ್ದರು, "ಹಝ್ರತ್ ಪೈಗಂಬರ್(ಸ) ಅವರ ಸ್ಥಿತಿ ಹೇಗಿದೆ? ಎಂದು, ಹೀಗೆ, ಹಝ್ರತ್ ಪೈಗಂಬರ್(ಸ)ರ ಮೇಲೆ ತುಂಬಾ ಪ್ರೀತಿಯನ್ನು ತೋರಿಸಿದ ಮಹಿಳೆಯಾಗಿದ್ದರು. (ಖುರೂನೆ ಊಲಾ ಕಿ ಮುಸಲ್ಮಾನ್ ಖವಾತೀನ್ ಕಾ ನಮೂನ, ಅನ್ವಾರುಲ್ ಉಲೂಮ್, ಸಂಪುಟ–25, ಪುಟ–440)

ಇನ್ನೊಂದು ಸ್ಥಳದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಈಗ ಈ ಪರಿಸ್ಥಿತಿಯ ನಕ್ಷೆಯನ್ನು ನಿಮ್ಮ ಮನಸ್ಸಿನಲ್ಲಿ ಬಿಡಿಸಿ. ನೀವು ಪ್ರತಿಯೊಬ್ಬರೂ ಸತ್ತವರನ್ನು ನೋಡಿರಬೇಕು. ನಿಮಗೆ ಹತ್ತಿರವಿರುವ ಯಾರಾದರೂ ಸಾಯುತ್ತಾರೆ, ಯಾರಾದರೂ ಅವರ ತಾಯಿ, ಯಾರೋ ತಂದೆ, ಇನ್ನೊಬ್ಬರ ಸಹೋದರ, ಸಹೋದರಿ ಸಾಯುವುದನ್ನು ನೋಡಿರಬಹುದು. ಆ ದೃಶ್ಯವನ್ನು ನೆನಪಿಸಿಕೊಳ್ಳಿ, ತಮ್ಮ ಪ್ರೀತಿಪಾತ್ರರ ಕೈಯಲ್ಲಿ ಅಥವಾ ಅವರ ಮನೆಯಲ್ಲಿ ಉತ್ತಮವಾದ ಆಹಾರವನ್ನು ಬೇಯಿಸಿ ಮತ್ತು ತಿಂದು, ಚಿಕಿತ್ಸೆ ಮಾಡಿಸಿ ಮತ್ತು ಸೇವೆ ಮಾಡಿಸಿ ಮೃತರಾಗುವವರ ಪರಿಸ್ಥಿತಿ ಹೇಗಾಗಿರುತ್ತದೆ? ಮತ್ತು ಮನೆಯಲ್ಲಿ ಹೇಗೆ ಖಿಯಾಮತ್‌ನ ಪರಿಸ್ಥಿತಿಯಾಗಿರುತ್ತದೆ ಮತ್ತು ಮೃತರಾಗಿರುವವರಿಗೆ ತಮ್ಮ ಮರಣವನ್ನು ಹೊರತುಪಡಿಸಿ ಬೇರೆ ಯಾವುದರ ಬಗ್ಗೆಯೂ ಯೋಚನೆ ಇರುವುದಿಲ್ಲ, ಆದರೆ ಹಝ್ರತ್ ಪೈಗಂಬರ್(ಸ)ರು ತಮ್ಮ ಸಹಾಬರವರ ಮನಸ್ಸಿನಲ್ಲಿ ಎಂತಹ ಪ್ರೀತಿಯನ್ನು ಸೃಷ್ಟಿಸಿದರು ಅಂದರೆ ಅವರು ಬೇರೆ ಯಾವುದರ ಬಗ್ಗೆಯೂ ಕಾಳಜಿ ವಹಿಸಲಿಲ್ಲ. ಆದರೆ ಈ ಪ್ರೀತಿಯು ನೀವು(ಸ) ಅಲ್ಲಾಹನಿಂದ ಪ್ರೀತಿಸಲ್ಪಟ್ಟಿದ್ದರಿಂದ ಮಾತ್ರ ಆಗಿತ್ತು. ಅವರು(ಸ) ಮುಹಮ್ಮದ್ ಎಂಬ ಕಾರಣಕ್ಕಾಗಿ ಪ್ರೀತಿಯಾಗಿರಲಿಲ್ಲ ಬದಲಿಗೆ ಅವರು ಅಲ್ಲಾಹನ ಸಂದೇಶವಾಹಕರಾಗಿದ್ದರಿಂದ ಆ ಪ್ರೀತಿಯಾಗಿತ್ತು. ನಂತರ ಅವರು(ರ) ಹೇಳಿದರು: ಆ ಜನರು ವಾಸ್ತವವಾಗಿ ಸರ್ವಶಕ್ತನಾದ ಅಲ್ಲಾಹನ ಪ್ರೇಮಿಗಳಾಗಿದ್ದರು ಮತ್ತು ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಪೈಗಂಬರ್(ಸ) ಅವರನ್ನು ಪ್ರೀತಿಸುತ್ತಿದ್ದರಿಂದ ಅವರ ಸಹಾಬರವರು ಅವರನ್ನು ಪ್ರೀತಿಸುತ್ತಿದ್ದರು ಮತ್ತು ಕೇವಲ ಪುರುಷರು ಅವರನ್ನು ಪ್ರೀತಿಸುತ್ತಿರಲಿಲ್ಲ ಬದಲಿಗೆ ಮಹಿಳೆಯರೂ ಸಹ ಅವರನ್ನು ಪ್ರೀತಿಸುತ್ತಿದ್ದರು. ಮುಂದೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅದು ಆ ಜನರ ಮನಸ್ಸಿನಲ್ಲಿ ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಪೈಗಂಬರ್(ಸ)ರ ಬಗ್ಗೆ ಸೃಷ್ಟಿಸಿದ ಪ್ರೀತಿಯಾಗಿತ್ತು, ಆದರೆ ಇದರ ಹೊರತಾಗಿಯೂ, ಅವರು ಸರ್ವಶಕ್ತನಾದ ಅಲ್ಲಾಹನನ್ನು ಎಲ್ಲಕ್ಕಿಂತ ಹೆಚ್ಚಾಗಿ ಆದ್ಯತೆ ನಿಡಿದರು ಮತ್ತು ಈ ತೌಹೀದ್‌ನ ಕಾರಣದಿಂದಲೇ ಅವರನ್ನು ಜಗತ್ತಿನಲ್ಲಿ ಎಲ್ಲೆಡೆ ಮೇಲುಗೈ ಸಾಧಿಸಿತು. ಅಲ್ಲಾಹನ ಸಲುವಾಗಿ ಅವರು ತಂದೆ ತಾಯಂದಿರ, ಸಹೋದರಿ – ಸಹೋದರರ, ಪತಿ – ಪತ್ನಿಯಂದಿರ ಪರಿವೆ ಮಾಡುತ್ತಿರಲಿಲ್ಲ. ಅವರ ಮುಂದೆ ಒಂದೇ ಸಂಗತಿಯಿತ್ತು. ಅಲ್ಲಾಹನು ಅವರಲ್ಲಿ ಸಂಪ್ರೀತನಾಗಬೇಕು ಎಂದು ಮಾತ್ರವಾಗಿತ್ತು ಅದು. ಆದ್ದರಿಂದಲೇ ಅಲ್ಲಾಹನು ಅವರ ಕುರಿತು **ರಝಿಯಲ್ಲಾಹು ಅನ್‌ಹುಮ್** (ಅಲ್ಲಾಹನು ಅವರಲ್ಲಿ ಸಂಪ್ರೀತನಾದನು) ಎಂದು ಹೇಳಿದನು. ಅವರು ಸರ್ವಶಕ್ತನಾದ ಅಲ್ಲಾಹನನ್ನು ಎಲ್ಲಕ್ಕಿಂತ ಮುಂದಿಟ್ಟರು ಮತ್ತು ಸರ್ವಶಕ್ತನಾದ ಅಲ್ಲಾಹನು ಅವರನ್ನು ಮೊದಲು ಆದ್ಯತೆ ನೀಡಿದನು. ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ, ನಂತರದ ಮುಸ್ಲಿಮರಿಗೆ ಈ ಸ್ಥಿತಿ ಇರಲಿಲ್ಲ ಮತ್ತು ಈಗ ಅವರು ಅಲ್ಲಾಹನೊಂದಿಗೆ ಸಂಬಂಧ ಹೊಂದಿದ್ದರೆ ಅದು ಕೇವಲ ಮಾನಸಿಕವಾಗಿದೆ. ಮಾನಸಿಕವಾಗಿ ನಾವು ಹೇಳುತ್ತೇವೆ ನಮ್ಮ ಸಂಬಂಧ ಅಲ್ಲಾಹನೊಂದಿಗೆ ದೊಡ್ಡದಾಗಿದೆ ಎಂದು. ನಾವು ಅಲ್ಲಾನನ್ನು ನಂಬುತ್ತೇವೆ ಎಂಬುದು ಮನಸ್ಸಿನಲ್ಲಿ ಖಚಿತವಾಗಿದೆ. ಏಕದೇವೋಪಾಸನೆಯನ್ನು ನಂಬುತ್ತಾರೆ. ಆದರೆ ಅದು ಹೃದಯದಲ್ಲಿಲ್ಲ. ಹೃದಯ ಬೇರೆಲ್ಲೋ ಸ್ಥಿರವಾಗಿದೆ. ಹಝ್ರತ್ ಪೈಗಂಬರ್(ಸ) ಅವರ ಬಗ್ಗೆ ಅವರ ಮುಂದೆ ಹೇಳಿದರೆ, ಅವರ ಹೃದಯದಲ್ಲಿ ಪ್ರೀತಿಯ ತಂತಿಗಳು ಕಂಪಿಸಲು ಪ್ರಾರಂಭಿಸುತ್ತವೆ. (ಖುತ್‌ಬಾತೆ ಮಹ್ಮೂದ್, ಸಂಪುಟ–23, ಪುಟ–46–47)

ಒಬ್ಬ ಚರಿತ್ರೆಗಾರ ಬರೆಯುತ್ತಾರೆ: ನಿಸ್ಸಂಶಯವಾಗಿಯೂ ಮದೀನದ ವಿಪತ್ತು ಬಹಳ ವೇದನಾಜನಕ ವಿಪತ್ತಾಗಿತ್ತು. ಆದರೆ ಒಂದು ವಿಪತ್ತನ್ನು ಸ್ವೀಕಾರ ಮಾಡುವುದರಲ್ಲಿ ಮಕ್ಕಾದವರ ಮತ್ತು ಮದೀನದವರ ನಡುವೆ ಬಹಳ ಅಂತರವಿತ್ತು.

ಮಕ್ಕಾದ ಮುಶ್ರಿಕರು ಬದ್ರ್‌ನ ವಿಪತ್ತುಗಳನ್ನು ಸ್ವಲ್ಪ ದೌರ್ಬಲ್ಯ, ಅಸಮಾಧಾನ ಮತ್ತು ಗಾಬರಿಯಿಂದ ಸ್ವೀಕಾರ ಮಾಡಿದರು. ಆದರೆ ಮದೀನದವರು ಉಹುದಿನ ವಿಪತ್ತನ್ನು ಸಾಟಿಯಿಲ್ಲದ ಸಹನೆ, ನಂಬಿಕೆ, ತಾಳ್ಮೆ, ಸ್ಥೈರ್ಯ ಮತ್ತು ಧೈರ್ಯದಿಂದ ಸ್ವೀಕಾರ ಮಾಡಿಕೊಂಡರು.

ಉಹುದಿನಲ್ಲಿ ಮುಸ್ಲಿಮರಿಗೂ ಸಾಕಷ್ಟು ನಷ್ಟ ಉಂಟಾಗಿತ್ತು. ಆದರೆ ಅವರು ಆ ನಷ್ಟವನ್ನು ಅತುಲ್ಯವಾದ ಸಹನೆ, ನಂಬುಗೆ, ಸ್ಥಿರಚಿತ್ತತೆ, ಧೈರ್ಯದಿಂದ ಕಂಡರು. ಮದೀನದ ಸೇನೆಗೆ ಉಹುದಿನಲ್ಲಿ ನಷ್ಟವುಂಟಾಯಿತು. ಅದರ ಪರಿಣಾಮವಾಗಿ ಮದೀನದ ನಿವಾಸಿಗಳಲ್ಲಿ ಯಾರಲ್ಲೂ ಗಾಬರಿ, ಅಸಮಾಧಾನ ಮತ್ತು ದೌರ್ಬಲ್ಯದ ಲಕ್ಷಣಗಳಿರಲಿಲ್ಲ. (ಉಹದ್, ಮುಹಮ್ಮದ್ ಅಹ್ಮದ್ ಬಾಶ್ಮಿಲ್, ಪುಟ–237–238, ನಫೀಸ್ ಅಕಾಡಮಿ ಕರಾಚಿ)

ಈ ವಿಷಯ ಮುಂದುವರೆಯುವುದು.

ಪೆಲಸ್ತೀನಿನ ಜನರಿಗಾಗಿ ದುಆ ಮಾಡಿರಿ. ಅಲ್ಲಾಹನು ಅವರ ಕಷ್ಟತೆಗಳನ್ನು ನೀಗಿಸಲಿ. ಶತ್ರುಗಳು ತಮ್ಮ ಸಕಲ ನೀಚ ಯೋಜನೆಗಳು ಮತ್ತು ಕೃತ್ಯಗಳ ಮೂಲಕ ಅವರನ್ನು ನಾಶಮಾಡಲು ಸನ್ನದ್ಧರಾಗಿ ನಿಂತಿದ್ದಾರೆ. ಶಕ್ತಿಶಾಲಿ ರಾಷ್ಟ್ರಗಳು ಯುದ್ಧವನ್ನು ತಡೆಯುವುದಕ್ಕೆ ಬದಲಾಗಿ ಅದಕ್ಕೆ ಎಣ್ಣೆ ಸುರಿಯಲು ಪ್ರಯತ್ನಿಸುತ್ತಿದ್ದಾರೆ. ಅಲ್ಲಾಹನೇ ಅವರ ಕೈಗಳನ್ನು ತಡೆಯಬಲ್ಲನು. ಆದ್ದರಿಂದ ಬಹಳವಾಗಿ ದುಆ ಮಾಡಿರಿ.

ಅದೇ ರೀತಿಯಲ್ಲಿ ಯಾವ ಚ್ಯಾರಿಟಿ ಸಂಸ್ಥೆ ಮೂಲಕ ಅವರಿಗೆ ಆಹಾರ, ಔಷಧಿ ಮುಂತಾದವು ಅಥವಾ ಯಾವುದೇ ವಿಧದ ಸಹಾಯ ತಲುಪಿಸಲು ಸಾಧ್ಯವೋ ಅವುಗಳನ್ನು ಅಹ್ಮದಿಗಳು ತಲುಪಿಸಬೇಕು. ನಿಮ್ಮ ಪ್ರದೇಶದಲ್ಲಿ ಅವರ ಪರವಾಗಿ ದೌರ್ಜನ್ಯವನ್ನು ಕೊನೆಗೊಳಿಸಲು ಪ್ರಯತ್ನವನ್ನು ಸಹ ಮಾಡಬೇಕು. ರಾಜಕರಣಿಗಳಿಗೆ ಪತ್ರಗಳನ್ನು ಬರೆಯಬೇಕು. ನೀವು ಮಾಡುತ್ತಿರುವುದು ತಪ್ಪು ಎಂದು ಅವರಿಗೆ ತಿಳಿಸಿಕೊಡಿರಿ. ದುಆಗಳನ್ನು ಮಾಡಲು ಮತ್ತು ತಮ್ಮ ಆಧ್ಯಾತ್ಮಿಕ ಸ್ಥಿತಿಗಳನ್ನು ಉತ್ತಮಗೊಳಿಸಲು ಪೆಲಸ್ತೀನಿಯರಿಗೂ ಅಲ್ಲಾಹನು ಸೌಭಾಗ್ಯ ನೀಡಲಿ. ಉಕ್ರೇನ್ ಮತ್ತು ರಶ್ಯಾದ ಯುದ್ಧದಲ್ಲೂ ಯುರೋಪ್ ಮತ್ತು ಅಮೇರಿಕ ನೇರವಾಗಿ ಭಾಗಿಗಳಾಗಿರುವರು ಎಂದು ವಾರ್ತೆಗಳು ಬರುತ್ತಿವೆ. ಅದರಿಂದಲೂ ಜಾಗತಿಕ ಮಹಾಯುದ್ಧದ ಸಾಧ್ಯತೆಗಳು ಇನ್ನಷ್ಟು ಹೆಚ್ಚುತ್ತಿವೆ. ಅದಕ್ಕಾಗಿಯೂ ದುಆ ಮಾಡಿರಿ. ಅಲ್ಲಾಹನು ಲೋಕವನ್ನು ನಾಶದಿಂದ ರಕ್ಷಿಸಲಿ.

ಅಣುಬಾಂಬಿನ ದುಷ್ಪರಿಣಾಮಗಳಿಂದ ರಕ್ಷಣೆ ಪಡೆಯಲು ಮುಂಜಾಗ್ರತೆ ಕ್ರಮವೆಂಬಂತೆ ನಾನು ಕೂಡ ಮತ್ತು ನನಗಿಂತ ಮೊದಲು ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮಹುಲ್ಲಾಹ್) ಕೂಡ ಒಂದು ಮದ್ದಿನ ಬಗ್ಗೆ ತಿಳಿಸಿದ್ದರು. ಅದರ ಕನಿಷ್ಠ ಒಂದು ಕೋರ್ಸ್ (ಮೂರು ಬಾರಿ ಸೇವಿಸುವುದು) ಪುನಃ ಶುರುಮಾಡಬೇಕು. ಅದೇ ರೀತಿಯಲ್ಲಿ ಅಹ್ಮದಿಯರು ಮನೆಗಳಲ್ಲಿ ಎರಡು ಮೂರು ತಿಂಗಳುಗಳಿಗಾಗಿ ದವಸಧಾನ್ಯಗಳನ್ನು ಸಂಗ್ರಹಿಸಿ ಇಡಬೇಕು. ಯುದ್ಧದ ನೇರವಾದ ಅಪಾಯಸಾಧ್ಯತೆ ಇರುವ ಪ್ರದೇಶಗಳಲ್ಲಿ ಇದರ ಕುರಿತು ವಿಶೇಷ ಗಮನವಹಿಸಬೇಕು. ಯುದ್ಧ ನಡೆಯದಿದ್ದರೂ ಇದು ಪ್ರಯೋಜನಕರವೇ ಆಗಿದೆ.

ಯಮನಿನ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರ ಬಿಡುಗಡೆಗೆ ಇರುವ ಮಾರ್ಗವನ್ನು ಬೇಗನೇ ಉಂಟುಮಾಡಲಿ.

ಪ್ರಗತಿಯ ಹೆಸರಲ್ಲಿ ಲೋಕದ ಕೊಳಕುಗಳಲ್ಲಿ ಬೀಳುವುದಕ್ಕೆ ಬದಲಾಗಿ ಅಲ್ಲಾಹನನ್ನು ಗುರುತಿಸಲು ಲೋಕಜನರಿಗೆ ಅಲ್ಲಾಹನು ಬುದ್ಧಿ ನೀಡಲಿ. ಮುಸ್ಲಿಂ ರಾಷ್ಟ್ರಗಳಿಗೂ ನ್ಯಾಯಪಾಲನೆ ಮಾಡಲು ಹಾಗೂ ಒಗ್ಗಟ್ಟಾಗಿ ನಿಲ್ಲಲು ಅಲ್ಲಾಹನು ಸೌಭಾಗ್ಯ ನೀಡಲಿ. ಅಲ್ಲಾಹನ ಸಂದೇಶವನ್ನು ಪ್ರತಿಯೊಬ್ಬರಿಗೂ ತಲುಪಿಸಲು ಅಲ್ಲಾಹನು ನಮಗೂ ಸೌಭಾಗ್ಯ ನೀಡಲಿ.

ಒಂದು ದುಃಖದ ಸುದ್ದಿಯೂ ಇದೆ. ಬಹಾಲ್‌ಪುರ್ ಜಿಲ್ಲೆಯ ಚಕ್‌ಚೌರಾಸಿ ಫತಹ್‌ಪುರ್ ಜಮಾಅತಿನ ಸದರ್, ಖಿಝ್ರ್ ಹಯಾತ್ ಚೀಮ ಸಾಹಿಬ್‌ರ ಪುತ್ರರಾದ ತಾಹಿರ್ ಇಖ್‌ಬಾಲ್ ಚೀಮ ಸಾಹಿಬ್ ಅವರನ್ನು ಇತ್ತೀಚಿನ ದಿನಗಳಲ್ಲಿ ಶಹೀದ್ ಮಾಡಿದ್ದಾರೆ. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್–.**

ತಾಹಿರ್ ಇಕ್ಬಾಲ್ ಚೀಮಾ ಸಾಹಿಬ್ ಶಹೀದ್ ಆದ ಘಟನೆ ಮಾರ್ಚ್ 4 ರಂದು ಇಬ್ಬರು ಅಪರಿಚಿತ ವ್ಯಕ್ತಿಗಳು ಅವರನ್ನು ಗುಂಡಿಕ್ಕಿ ಕೊಂದಿದ್ದಾರೆ. ಶಹಾದತ್ತಿನ ಸಮಯದಲ್ಲಿ, ಮೃತರಿಗೆ ಅರವತ್ತು ವರ್ಷ ಪ್ರಾಯಗಿತ್ತು. ಹೆಚ್ಚಿನ ವಿವರಗಳು ಹೀಗಿವೆ: ತಾಹಿರ್ ಇಕ್ಬಾಲ್ ಚೀಮಾ ಸಾಹಿಬ್, ಜಮಾಅತ್ ಚಕ್ ಚೌರಾಸಿ ಫತೇಹ್ ಜಿಲ್ಲೆಯ ಬಹವಲ್ಪುರದ ಅಧ್ಯಕ್ಷರು ಫಜ್ರ್ ನಮಾಝ್ ಮುಗಿಸಿ ತಮ್ಮ ಎಂದಿನ ನಡಿಗೆಗೆ ತೆರಳಿದರು. ಇಬ್ಬರು ಅಪರಿಚಿತ ದ್ವಿಚಕ್ರವಾಹನ ಸವಾರರು ಹಿಂಬಾಲಿಸಿ ಗುಂಡಿನ ದಾಳಿ ನಡೆಸಿದ್ದಾರೆ. ಎರಡು ಗುಂಡುಗಳು ಅವರ ತಲೆಗೆ ತಗುಲಿದ ಪರಿಣಾಮವಾಗಿ

ಅವರು ಸ್ಥಳದಲ್ಲೇ ಶಹೀದ್ ಆಗಿದ್ದಾರೆ. ಘಟನೆ ಬಳಿಕ ದುಷ್ಕರ್ಮಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ. ಪೊಲೀಸರು ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದರೂ ಈ ಬಗ್ಗೆ ಯಾವುದೇ ತನಿಖೆ ನಡೆಸಿಲ್ಲ. ಆದರೆ, ಪ್ರಕರಣ ದಾಖಲಾಗಿದೆ. ದಿವಂಗತ ಶಹೀದರಿಗೆ ಯಾರ ವಿರುದ್ಧವೂ ದ್ವೇಷ ಅಥವಾ ವೈಯಕ್ತಿಕ ದ್ವೇಷವಿರಲಿಲ್ಲ. ಅವರ ಹಳ್ಳಿ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ, ಅವರು ಚಿರಪರಿಚಿತರು ಮತ್ತು ಪ್ರಸಿದ್ಧರಾಗಿದ್ದರು. ಅವರ ಹುತಾತ್ಮತೆಗೆ ಧಾರ್ಮಿಕ ಅಂಶವನ್ನು ಹೊರತುಪಡಿಸಿ ಬೇರೆ ಯಾವುದೇ ಕಾರಣವಿಲ್ಲ.

ದಿವಂಗತ ಶಹೀದ್ ಅವರ ಕುಟುಂಬದಲ್ಲಿ ಅಹ್ಮದಿಯತ್ ಅವರ ಮುತ್ತಜ್ಜ ಮಕರ್‌ಮ್ ಮುಹ್ಸಿನ್ ಖಾನ್ ಸಾಹಿಬ್ ಅವರ ಸಹೋದರ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಹಾಬಿ ಹಝ್ರತ್ ಹಕಮ್ ದೀನ್ ಸಾಹಿಬ್(ರ) ಅವರಿಂದ ಬಂದಿತ್ತು. ಅವರು 1905ರಲ್ಲಿ ಚಕ್ 46 ಸರ್ಗೋದಾ ನಿಂದ ಖಾದಿಯಾನ್‌ಗೆ ಹೋಗಿ ಬೈಅತ್ ಮಾಡಿದರು, ಮತ್ತು ಖಾದಿಯಾನ್‌ನಲ್ಲಿಯೇ ಅವರು ನೆಲೆಸಿದರು. ತದನಂತರ, ಅವರು ಬೈಅತ್ ಮಾಡುವ ಮೂಲಕ ತಮ್ಮ ಸಹೋದರರು ಮತ್ತು ಇತರ ಕುಟುಂಬ ಸದಸ್ಯರನ್ನು ಅಹ್ಮದಿಯತ್ತಿಗೆ ಸೇರಲು ಪ್ರೇರೇಪಿಸಿದರು, ಇದರಿಂದಾಗಿ ದಿವಂಗತ ಶಹೀದ್ ಅವರ ಮುತ್ತಜ್ಜ ಮೊಹ್ಸಿನ್ ಖಾನ್ ಸಾಹಿಬ್ ಅವರು ತಮ್ಮ ಎಲ್ಲಾ ಸಹೋದರರೊಂದಿಗೆ ಬೈಅತ್ ಮಾಡುವ ಮೂಲಕ ಅಹ್ಮದಿಯತ್ತಿಗೆ ಸೇರಿದರು. ನಂತರ ಈ ಕುಟುಂಬವು ಚಕ್ 84 ಬಹವಲ್ಪುರಕ್ಕೆ ಸ್ಥಳಾಂತರಗೊಂಡಿತು. ದಿವಂಗತ ಶಹೀದ್ ಕ್ರಿ.ಶ. 1964 ರಲ್ಲಿ ಚಕ್ 84 ಬಹವಲ್ಪುರದಲ್ಲಿ ಜನಿಸಿದರು. ಅಲ್ಲಿ ಮೆಟ್ರಿಕ್ಯುಲೇಷನ್ ತನಕ ಓದಿದರು. ಜಮೀನುದಾರನ ವೃತ್ತಿ ಮಾಡುತ್ತಿದ್ದರು. ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು. ಶಹೀದ್ ಆದ ಸಮಯದಲ್ಲಿ ಅವರು ಜಮಾಅತ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದರು. ಈ ಹಿಂದೆ ಹಣಕಾಸು ಕಾರ್ಯದರ್ಶಿಯಾಗಿ ಮತ್ತು ಝಈಮ್ ಅನ್ಸಾರುಲ್ಲಾದ ಸೇವೆಯನ್ನು ಮುಂದುವರೆಸಿದರು. ಚಂದಗಳನ್ನು ಪಾವತಿಸುವಲ್ಲಿ ನಿಯಮಿತವಾಗಿದ್ದರು, ಉಪವಾಸ ಮತ್ತು ದೈನಂದಿನ ಐದು ಹೊತ್ತಿನ ನಮಾಝ್‌ನ್ನು ನಿಯಮಿತವಾಗಿ ನಿರ್ವಹಿಸುತ್ತಿದ್ದರು ಅದಲ್ಲದೆ ನಮಾಝೆ ತಹಜ್ಜುದ್ ನಿರ್ವಹಿಸುವಲ್ಲಿ ಹೆಚ್ಚಿನ ಕಾಳಜಿ ವಹಿಸುತ್ತಿದ್ದರು. ಪ್ರಯಾಣದ ವೇಳೆಯೂ ನಮಾಝ್ ನಿರ್ವಹಿಸಲು ವಿಶೇಷ ವ್ಯವಸ್ಥೆ ಮಾಡುತ್ತಿದ್ದರು. ಖಿಲಾಫತ್ ಬಗ್ಗೆ ಪ್ರೀತಿ ಇತ್ತು. ಅವರು ನನ್ನ ಖುತ್‌ಬಗಳನ್ನು ನಿಯಮಿತವಾಗಿ ಕೇಳುತ್ತಿದ್ದರು ಮತ್ತು ಮನೆಯಲ್ಲಿ ಎಲ್ಲರೂ ಖುತ್‌ಬ ಜುಮುಅವನ್ನು ಕೇಳಿದ್ದಾರೆಯೇ ಎಂದು ಪರಿಶೀಲಿಸುತ್ತಿದ್ದರು. ಶಹಾದತ್ತಿನ ಸಮಯದಲ್ಲಿ, ಎಲ್ಲಾ ಕಡ್ಡಾಯ ಚಂದಗಳು ಮತ್ತು ಹಿಸ್ಸ ಜಾಯೆದಾದ್‌ನ ಲೆಕ್ಕ ಪೂರ್ಣವಾಗಿತ್ತು. ಜಮಾತ್ತಿನ ಅತಿಥಿಗಳ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಿದ್ದರು ಮತ್ತು ಅವರ ಮನೆಯಲ್ಲಿ ಅವರನ್ನು ಕರೆದುಕೊಂಡು ಹೋಗಲು ಪ್ರಯತ್ನಿಸುತ್ತಿದ್ದರು. ಮೃತರು ಅಲ್ಲಿನ ಖಬ್ರಸ್ತಾನದ ವ್ಯವಸ್ಥೆಯು ಸ್ವತಃ ಮಾಡಿದ್ದರು. ಪಾಕಿಸ್ತಾನದಲ್ಲಿ ಖಬರ್‌ಗಳ ಹಾಗೂ ಖಬ್ರಸ್ತಾನದ ದೊಡ್ಡ ಸಮಸ್ಯೆಯಾಗಿದೆ. ಪ್ರತಿದಿನ ಕೆಲವು ದುಷ್ಟರು ಅಥವಾ ಗುಂಪು ನಮ್ಮ ಖಬರ್‌ಗಳ ಶಾಸನಗಳನ್ನು ಒಡೆದು ಹಾಕುತ್ತಾರೆ. ಅವರು ತಮ್ಮ ಖಬ್ರಸ್ತಾನದ ವ್ಯವಸ್ಥೆಯು ಮಾಡಿದ್ದರು. ಅವರು ಖಬರ್‌ಗಳನ್ನು ಸಹ ಪರೀಕ್ಷಿಸುತ್ತಿದ್ದರು. ಇವತ್ತಿನ ದಿನಗಳಲ್ಲಿ ಇದು ಕೂಡ ಸಾಕಷ್ಟು ಕೆಲಸವಾಗಿದೆ. ಅನ್ಯಧರ್ಮೀಯರೂ ಸೇರಿದಂತೆ ಗ್ರಾಮದ ಬಹುತೇಕ ಜನರು ಇವರೊಂದಿಗೆ ಅಮಾನತ್‌ಗಳನ್ನು ಇರಿಸಿದ್ದರು. ಅವರೆಲ್ಲರಿಗೆ ನಂಬಿಕೆಯಿದ್ದರೆ ಅದು ಅಹ್ಮದೀಯನ ಮೇಲೆ ಮಾತ್ರ. ಇದೂ ಕೂಡ ಈ ಜನರ ವಿಚಿತ್ರ ದಾರಿ. ಆದಾಗ್ಯೂ, ಅಮಾನತ್‌ಗಳನ್ನು ಇರಿಸುತ್ತಿದ್ದರು ಉದಾತ್ತ ವ್ಯಕ್ತಿಗಳು, ಆದರೆ ಇತರರು ಇನ್ನೂ ಅರ್ಥಮಾಡಿಕೊಳ್ಳುವುದಿಲ್ಲ.

ಅವರ ಪತ್ನಿ ಕಿಶೋರ್ ಸಾಹಿದ್ ಸಾಹಿಬಾ ಹೇಳುತ್ತಾರೆ: ನನ್ನ ದಿವಂಗತ ಪತಿಯ ವರ್ತನೆ ನನ್ನ ಬಗ್ಗೆ ತುಂಬಾ ಕರುಣೆಯಿಂದ ಕೂಡಿತ್ತು. ಮನೆಯಲ್ಲಿ ನಮಾಝ್ ನಿರ್ವಹಣೆ ಮತ್ತು ಖಲೀಫರ ಖುತ್‌ಬಗಳನ್ನು ಕೇಳುವುದನ್ನು ಪರಿಶೀಲಿಸಲಾಗುತ್ತಿತ್ತು. ನನ್ನ ಪ್ರೀತಿಪಾತ್ರರೊಂದಿಗೆ ಯಾವಾಗಲೂ ಗೌರವ ಮತ್ತು ಸ್ನೇಹ ಸಂಬಂಧದಿಂದ ವರ್ತಿಸುತ್ತಿದ್ದರು.

ದಿವಂಗತ ಶಹೀರ ಪುತ್ರಿ ಮದೀಹಾ ತಾಹಿರ್ ಹೇಳುತ್ತಾರೆ: ಜಮಾಅತ್ತಿನ ಸೇವೆಯಲ್ಲಿ ಮುಂದಾಳತ್ವ ವಹಿಸುತ್ತಿದ್ದರು. ವಿಧೇಯತೆಯ ಲಕ್ಷಣವು ಪ್ರಮುಖವಾಗಿತ್ತು. ಖಿಲಾಫತ್ ಬಗ್ಗೆ ಅಪಾರ ಗೌರವ ಮತ್ತು ಭಕ್ತಿಯೊಂದಿಗೆ ಸಂಬಂಧ ಹೊಂದಿದ್ದರು. ಅವರು ನಿರ್ಭೀತ ಮತ್ತು ಧೈರ್ಯಶಾಲಿ ಅಹ್ಮದಿಯಾಗಿದ್ದರು. ಮಕ್ಕಳೊಂದಿಗೆ ಯಾವಾಗಲೂ ಸೌಹಾರ್ದ ಸಂಬಂಧವನ್ನು ಹೊಂದಿದ್ದರು.

ಅಮೀರ್ ಸಾಹಿಬ್ ಜಿಲ್ಲೆ ಬಹವಾಲ್ಪುರ್, ಮುರಬ್ಬಿ ಜಿಲ್ಲೆ ಬಹವಾಲ್ಪುರ್ ಮತ್ತು ಇತರ ಹುದ್ದೆದಾರರು ಸಹ ಮೃತ ಶಹೀದ್ ಅವರನ್ನು ಶ್ಲಾಘಿಸಿದ್ದಾರೆ. ಅವರದು ಶ್ರೇಷ್ಠ ವ್ಯಕ್ತಿತ್ವ, ಅವರು ಸೇವಾ ಮನೋಭಾವನೆಗೆ ಮುಡಿಪಾಗಿದ್ದರು. ಆತಿಥ್ಯವು ಒಂದು ಪ್ರಮುಖ ಲಕ್ಷಣವಾಗಿತ್ತು. ಅವರು ಕೇಂದ್ರ ಪ್ರತಿನಿಧಿಗಳು ಮತ್ತು ವಾಖಿಫೆ ಝಿಂದಗಿಯೊಂದಿಗೆ ನಿಕಟ ಸಂಬಂಧ ಹೊಂದಿದ್ದರು.

ಮೃತ ಶಹೀದರ ಪತ್ನಿಯನ್ನು ಹೊರತುಪಡಿಸಿ ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ. ಅವರ ಒಬ್ಬ ಪುತ್ರ ಲುಕ್ಮಾನ್ ಅಹ್ಮದ್ ತನ್ನ ಕುಟುಂಬದೊಂದಿಗೆ ಜರ್ಮನಿಯಲ್ಲಿದ್ದಾರೆ. ಪುತ್ರಿ ಮದಿಹಾ ತಾಹಿರ್ ಇಲ್ಲಿ ಯುಕೆ ನಲ್ಲಿ ವಾಸಿಸುತ್ತಿದ್ದಾರೆ. ಪುತ್ರ ಸಲ್ಮಾನ್ ತಾಹಿರ್ ಅಲ್ಲಿ ಜಮೀನ್ದಾರನಾಗಿದ್ದರು. ಅಲ್ಲಾಹನು ದಿವಂಗತ ಶಹೀದ್‌ರಿಗೆ ಉನ್ನತ ಪದವಿ ನೀಡಲಿ ಹಾಗೂ ಕಾರುಣ್ಯ ಮತ್ತು ಮಗ್‌ಫಿರತ್‌ನೊಂದಿಗೆ ವರ್ತಿಸಲಿ ಹಾಗೂ ಅವರ ಸಂಬಂಧಿಕರಿಗೆ ಉತ್ತಮವಾದ ಸಹನೆ ದಯಪಾಲಿಸಲಿ ಹಾಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ. ಜುಮುಅ ನಮಾಝಿನ ನಂತರ ಅವರ ಜನಾಝ ಗ್ಹಾಯಿಬ್ ನಿರ್ವಹಿಸುತ್ತೇನೆ.

...*...*...*...

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಹಕ್ಕುಗಳನ್ನು ಈಡೇರಿಸುವ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಅನೇಕ ಸ್ಥಳಗಳಲ್ಲಿ ನಮ್ಮ ಗಮನವನ್ನು ಹರಿಸಿದ್ದಾನೆ. ನಾವು ಇಂದು ಈದ್ ದಿನದಂದು ಆ ಹಕ್ಕುಗಳನ್ನೂ ಹೊಣೆಗಾರಿಕೆಗಳನ್ನೂ ಈಡೇರಿಸುವ ಬಗ್ಗೆ ಪ್ರತಿಜ್ಞೆ ಮಾಡಿ ನಾವು ಇನ್ನು ಮುಂದೆ ಅವುಗಳನ್ನು ನಮ್ಮ ಜೀವಿತದ ಭಾಗಗಳನ್ನಾಗಿ ಮಾಡಬೇಕಾಗಿದೆ. ಅವುಗಳ ಬಗ್ಗೆ ನಾನು ಹಿಂದಿನ ಖುತ್‌ಬಗಳಲ್ಲಿ ಪ್ರಸ್ತಾಪಿಸುತ್ತಾ ಬಂದಿದ್ದೇನೆ. ಹೀಗೆ ನಾವು ಮಾಡುವುದಾದರೆ ನಾವು ರಮಝಾನಿನ ಉದ್ದೇಶಲಕ್ಷ್ಯಗಳನ್ನು ಗಳಿಸುವವರಾಗುವೆವು. ಮತ್ತು ಈದ್ ದಿನಾಚರಣೆಯ ಉದ್ದೇಶಲಕ್ಷ್ಯವನ್ನು ಗಳಿಸುವವರಾಗುವೆವು.

ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲ ಬಿನಸ್ರಿಹಿಲ್ ಅಝೀಝ್ ರವರು ಸೂರತುನ್ನಿಸಾ ಆಯತ್ 37 ನ ಕುರಿತು ಹೇಳಿದರು: ನಾನು ಪಠಿಸಿದ ಪವಿತ್ರ ಖುರ್‌ಆನ್ ವಚನದಲ್ಲಿ ಅಲ್ಲಾಹನು ಕೆಲವು ಕಡ್ಡಾಯ ಕರ್ತವ್ಯಗಳ ಬಗ್ಗೆ ನಮ್ಮ ಗಮನವನ್ನು ಹರಿಯಿಸಿದ್ದಾನೆ. ಅವುಗಳನ್ನು ಈಡೇರಿಸದವರು ಅಹಂಭಾವಿಗಳೂ ಜಂಭ ಕೊಚ್ಚುವವರೂ ಆಗಿರುತ್ತಾರೆ. ಅಂತಹ ಜನರನ್ನು ಅಲ್ಲಾಹನು ಇಷ್ಟಪಡುವುದಿಲ್ಲ. ಅಲ್ಲಾಹನು ಯಾರನ್ನು ಇಷ್ಟಪಡುವುದಿಲ್ಲವೋ ಅವರಿಗೆ ಧರ್ಮವೂ ಇಲ್ಲ ಲೋಕವೂ ಇಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಸಂದರ್ಭದಲ್ಲಿ ತೀವ್ರವಾಗಿ ಮುನ್ನೆಚ್ಚರಿಕೆ ನೀಡುತ್ತಾ ಹೇಳಿದರು: ಅಲ್ಲಾಹನು ಅಹಂಭಾವಿಗಳನ್ನು ಸ್ವರ್ಗದಲ್ಲಿ ಪ್ರವೇಶಿಸಲು ಬಿಡಲಾರನು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಮನುಷ್ಯನ ಹಕ್ಕುಗಳನ್ನು ಈಡೇರಿಸಿಕೊಡದಿರುವುದು, ಜನರನ್ನು ಕೀಳೆಂದು ಭಾವಿಸುವುದು, ಜನರನ್ನು ತಿರಸ್ಕಾರ ಭಾವದಿಂದ ನೋಡುವುದು, ಅವರೊಂದಿಗೆ ಕೆಟ್ಟದಾಗಿ ವರ್ತಿಸುವುದು ಅಹಂಭಾವವಾಗಿದೆ. ಆದರೆ ಈದ್ ದಿನ ಒಳ್ಳೆಯ ಬಟ್ಟೆ ಧರಿಸುವುದು, ಶೃಂಗಾರ ಮಾಡುವುದು, ಸುಗಂಧ ದ್ರವ್ಯ ಒರೆಸುವುದು ಮೊದಲಾದುವು ಅಲ್ಲಾಹನಿಗೆ ಇಷ್ಟಕರವಾಗಿವೆ. ಆದರೆ ಅವುಗಳನ್ನು ಅಹಂಭಾವ ಪ್ರಕಟಿಸುವ ಮಾರ್ಗಗಳನ್ನಾಗಿ ಮಾಡುವುದು ಅಲ್ಲಾಹನಿಗೆ ಇಷ್ಟಕರವಲ್ಲ.

ಮನುಷ್ಯನನ್ನು ಸೃಷ್ಟಿಸಿದುದರ ಉದ್ದೇಶ ಅಲ್ಲಾಹನನ್ನು ಆರಾಧಿಸುವುದು ಎಂದು ಸರ್ವಶಕ್ತನಾದ ಅಲ್ಲಾಹನು ಹೇಳಿದ್ದಾನೆ. ಹೀಗೆ ಹೇಳಿದುದರ ಅರ್ಥ ಅಲ್ಲಾಹನಿಗೆ ನಮ್ಮ ಆರಾಧನೆಯ ಆವಶ್ಯಕತೆ ಇದೆ ಎಂದಲ್ಲ. ಆರಾಧನೆ ಮಾಡುವುದು ನಮ್ಮ ಹಿತಕ್ಕೋಸ್ಕರವಾಗಿದೆ. ಆರಾಧನೆ ನಮ್ಮನ್ನು ಕೆಡುಕುಗಳಿಂದ ತಡೆಗಟ್ಟುತ್ತದೆ. ಆದುದರಿಂದ ಆರಾಧನೆಗಳ, ನಮಾಝ್‌ಗಳ ಮತ್ತು ಅಲ್ಲಾಹನ ಸ್ಮರಣೆಯ ಲಾಭ ಸಿಗುವುದು ನಮಗೆಯೇ ಆಗಿದೆ. ಅಲ್ಲಾಹನು ಅವುಗಳಿಗೆ ಬಹಳ ಪ್ರತಿಫಲವನ್ನು ನೀಡುತ್ತಾನೆ. ಒಬ್ಬ ವ್ಯಕ್ತಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದನು: ನನ್ನನ್ನು ಸ್ವರ್ಗಕ್ಕೆ ಪ್ರವೇಶಿಸುವಂತೆ ಮಾಡುವಂತಹ ಕರ್ಮವನ್ನು ಹೇಳಿಕೊಡಿರಿ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಆರಾಧನೆ ಮಾಡು. ಜನರೊಂದಿಗೆ ಒಳ್ಳೆಯ ರೀತಿಯಲ್ಲಿ ವರ್ತಿಸು. ಅವರ ಹಕ್ಕುಗಳನ್ನು ಈಡೇರಿಸು. ಹೀಗೆ ಮಾಡಿದರೆ ಅವು ನಿನ್ನನ್ನು ಸ್ವರ್ಗಕ್ಕೆ ಒಯ್ಯುವುವು.

ಇನ್ನೊಂದು ಹದೀಸು ವರದಿ ಹೀಗಿದೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಒಬ್ಬನು ಕೇವಲ ಅಲ್ಲಾಹನಿಗೋಸ್ಕರ ಎರಡು ಈದ್‌ಗಳ ರಾತ್ರಿಗಳಲ್ಲಿ ಆರಾಧನೆ ಮಾಡುವುದಾದರೆ ಅವನ ಹೃದಯ ಶಾಶ್ವತವಾಗಿ ಜೀವಂತವಾಗಿ ಇರುವಂತೆ

ಮಾಡಲಾಗುವುದು. ಇದೆಷ್ಟು ದೊಡ್ಡ ಶುಭವಾರ್ತೆಯಾಗಿದೆ. ಅಲ್ಲಾಹನಿಗೋಸ್ಕರ ಆರಾಧನೆ ಮಾಡುವುದರಿಂದ ಯಾವಾಗಲೂ ಬಹುಮಾನ ಸಿಗುತ್ತಾ ಇರುವುದು. ಆದುದರಿಂದ ಈದ್ ಎಂದರೆ ಸಂತೋಷದಿಂದ ಸಂಭ್ರಮಿಸುವುದರ ಹೆಸರಲ್ಲ. ಈದ್ ರಾತ್ರಿಗಳನ್ನು ಆರಾಧನೆಗಳಿಂದ ಜೀವಂತಗೊಳಿಸುವುದರ ಹೆಸರು ಆಗಿದೆ. ಅದರಿಂದ ಶಾಶ್ವತವಾದ ಆಧ್ಯಾತ್ಮಿಕ ಜೀವನ ಲಭಿಸುತ್ತದೆ.

ರಮಝಾನ್ ಕೊನೆಗೊಂಡಿತು ಇನ್ನು ಮುಂದೆ ಸುಖವಾಗಿ ನಿದ್ರಿಸಬಹುದು ಎಂದು ಯೋಚಿಸುವವರು ತಪ್ಪು ಮಾಡುತ್ತಿದ್ದಾರೆ. ಅವರು ಸೆಹ್ರಿ ಸಮಯ ಎದ್ದಾಗ ಎರಡು ರಕಅತ್ ನಫ್ಲ್ ನಿರ್ವಹಿಸುತ್ತಿದ್ದರು. ಆದರೆ ಈದ್ ದಿನದಂದು ಬಹಳ ಜನರು ಸುಬ್‌ಹ್ ನಮಾಝ್‌ಗೆ ಎದ್ದೇಳಲು ಉದಾಸೀನತೆ ತೋರಿಸುತ್ತಾರೆ. ಇದು ತಪ್ಪು. ರಮಝಾನ್ ನಂತರ ಆರಾಧನೆಗಳಲ್ಲಿ ಉತ್ತಮ ಸ್ಥಿತಿ ತಲೆದೋರಬೇಕಾಗಿದೆ. ಸುಬ್‌ಹ್ ನಮಾಝ್‌ನಲ್ಲಿ ಸದಾ ಸೇರುವವರಾಗಬೇಕು. ಮಕ್ಕಳನ್ನು ಕರೆದುಕೊಂಡು ಮಸ್‌ಜಿದ್‌ಗಳಲ್ಲಿ ನಮಾಝ್ ನಿರ್ವಹಿಸಬೇಕು. ಆರಾಧನೆಗಳು ಮತ್ತು ಜನರ ಹಕ್ಕುಗಳನ್ನು ಈಡೇರಿಸುವ ಬಗ್ಗೆ ಮೊದಲಿಗಿಂತ ಹೆಚ್ಚಾಗಿ ಶ್ರದ್ಧೆ ನೀಡಬೇಕು.

ನಾನು ಪಠಿಸಿದ ಪವಿತ್ರ ಖುರ್‌ಆನ್ ವಚನದಲ್ಲಿ ಹೆತ್ತವರ ಹಕ್ಕುಗಳನ್ನು ಈಡೇರಿಸುವ ಬಗ್ಗೆ ಆಜ್ಞಾಪಿಸಲಾಗಿದೆ. ಆದುದರಿಂದ ತಂದೆ ತಾಯಂದಿರಿಗೆ ಸೇವೆ ಮಾಡುವುದರಲ್ಲಿ ಕೊರತೆ ತಲೆದೋರಬಾರದು. ಬಹುದೇವಾರಾಧನೆಗೆ ಸಂಬಂಧಿಸಿ ಹೊರತು ಅವರನ್ನು ಪೂರ್ಣವಾಗಿ ಅನುಸರಿಸಬೇಕೆಂದು ಆಜ್ಞಾಪಿಸಲಾಗಿದೆ. ಬಹುದೇವಾರಾಧನೆಗೆ ಸಂಬಂಧಿಸಿದಂತೆ ತಂದೆ ತಾಯಂದಿರೊಂದಿಗೆ ಅತ್ಯಂತ ವಿನಯದಿಂದ ಹೇಳಬೇಕು ಬಹು ದೇವಾರಾಧನೆಗೆ ಸಂಬಂಧಿಸಿ ನಾನು ಅನುಸರಿಸಲಾರೆ ಎಂದು.

ಸಂಬಂಧಿಕರೊಂದಿಗೆ ಉತ್ತಮವಾಗಿ ವರ್ತಿಸುವ ಬಗ್ಗೆ ಆಜ್ಞಾಪಿಸಲಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಯಾರು ತನಗೆ ಆಹಾರಕ್ಕೆ ಸಂಬಂಧಿಸಿ ವಿಶಾಲತೆಯನ್ನು ಇಚ್ಛಿಸುತ್ತಾನೋ ಯಾರು ತನ್ನ ಆಯುಸ್ಸಿನಲ್ಲಿ ಅನುಗ್ರಹವನ್ನು ಆಶಿಸುತ್ತಾನೋ ಯಾರು ತನ್ನ ಬಗ್ಗೆ ಉತ್ತಮ ಪ್ರಸ್ತಾಪ ಹೆಚ್ಚಾಗಬೇಕೆಂದು ಬಯಸುತ್ತಾನೋ ಅವನು ರಕ್ತ ಸಂಬಂಧಿಗಳೊಂದಿಗೆ ಉತ್ತಮ ಸಂಬಂಧ ಸ್ಥಾಪಿಸಬೇಕು. ಜನರು ತಮ್ಮ ಈದ್ ಸಂತೋಷಗಳಲ್ಲಿ ತಮ್ಮ ನೆರೆಹೊರೆಯವರನ್ನು ಸಹ ಭಾಗವಹಿಸುವಂತೆ ಮಾಡಬೇಕು. ನಿಮ್ಮೊಂದಿಗೆ ಅವರ ವರ್ತನೆ ಉತ್ತಮವಾಗಿಲ್ಲವಾದರೂ ನಾವು ಅವರೊಂದಿಗೆ ಉತ್ತಮವಾಗಿ ವರ್ತಿಸಬೇಕು. ಏಕೆಂದರೆ ಹಾಗೆ ಮಾಡಬೇಕೆಂದು ಅಲ್ಲಾಹನು ಮತ್ತು ಅವನ ಸಂದೇಶವಾಹಕರು ಆಜ್ಞಾಪಿಸಿರುವರು. ಅಲ್ಲಾಹನು ಅದಕ್ಕೋಸ್ಕರ ಪ್ರತಿಫಲ ನೀಡುತ್ತಾನೆ.

ಇಲ್ಲಿ ಒಂದು ವಿಷಯದ ಬಗ್ಗೆ ನಿಮ್ಮ ಗಮನ ಹರಿಸಲು ಇಚ್ಛಿಸುತ್ತೇನೆ. ಕೆಲವರು ತಮ್ಮ ಸಂಬಂಧಿಕರ ಮಾತುಗಳ ಕಾರಣದಿಂದ ತಮ್ಮ ಪತ್ನಿಯರನ್ನು ಆ ಸಂಬಂಧಿಕರನ್ನು ಭೇಟಿಯಾಗುವುದರಿಂದ ತಡೆಯುತ್ತಾರೆ. ಇದು ಅತ್ಯಂತ ತಿಳಿಗೇಡಿತನದ ವರ್ತನೆಯಾಗಿದೆ. ಅದರ ಬಗ್ಗೆ ಅಲ್ಲಾಹನು ತನ್ನ ಅತೃಪ್ತಿ ಸೂಚಿಸಿರುವನು. ಈ ವಿಷಯಕ್ಕೆ ಸಂಬಂಧಿಸಿ ವಿನಯದಿಂದ ವರ್ತಿಸಬೇಕು. ಪತ್ನಿಯ ಸಂಬಂಧಿಕರೊಂದಿಗೆ ಸಹ ಉತ್ತಮವಾಗಿ ವರ್ತಿಸಬೇಕು. ಅದಕ್ಕೆ ಸಹ ಅಲ್ಲಾಹನು ಪ್ರತಿಫಲ ನೀಡುವನು. ಯಾವ ಮನುಷ್ಯನು ಅಲ್ಲಾಹನಿಗೋಸ್ಕರ ಬಾಹ್ಯವಾಗಿ ತಗ್ಗಿದ ಭಾವನೆಯಿಂದ ಅನ್ಯನಿಗೆ ಸಲಾಮ್ ಹೇಳುತ್ತಾನೋ ರಾಜಿ ಮಾಡಿಕೊಳ್ಳಲು ಮುಂದಾಗುತ್ತಾನೋ ಅವನು ಅಲ್ಲಾಹನ ಅನುಗ್ರಹಗಳಿಗೆ ವಾರೀಸುದಾರನಾಗುತ್ತಾನೆ. ಈ ವಿಷಯದ ಬಗ್ಗೆ ಸಹ ಪ್ರತಿಯೊಬ್ಬ ಅಹ್ಮದಿ ವಿಶಿಷ್ಟವಾಗಿ ಶ್ರದ್ಧೆ ನೀಡುವುದು ಆವಶ್ಯಕವಾಗಿದೆ.

ಪತಿ ಪತ್ನಿಯರ ಪರಸ್ಪರ ಸಂಬಂಧಿಗಳ ಬಗ್ಗೆ ಸಹ ನಿಗಾವಹಿಸಬೇಕು. ಮನೆಗಳಲ್ಲಿ ಚಿಕ್ಕಪುಟ್ಟ ವಿಷಯಗಳಿಗೆ ಸಂಬಂಧಿಸಿ ಮನಸ್ತಾಪಗಳು ಸಂಭವಿಸುತ್ತವೆ. ಅವುಗಳನ್ನು ದೂರ ಸರಿಸಲು ಪ್ರಯತ್ನಿಸಬೇಕಾಗಿದೆ. ಪತ್ನಿಯೊಂದಿಗೆ ಉತ್ತಮವಾಗಿ ಪುರುಷನು ವರ್ತಿಸಬೇಕೆಂಬ ಆಜ್ಞೆಯೊಂದಿಗೆ ಪತ್ನಿಯರೊಂದಿಗೆ ಸಹ ಹೀಗೆ ಆಜ್ಞಾಪಿಸಲಾಗಿದೆ: ಅವರು ತಮ್ಮೊಳಗೆ ಇದ್ದುದರಲ್ಲಿ ತೃಪ್ತಿ ಪಡುವ ಮನೋಭಾವ ಬೆಳೆಸಿಕೊಳ್ಳಬೇಕು ಮತ್ತು ತಮ್ಮ ಮನೆಗಳನ್ನು ಉತ್ತಮವಾಗಿ ನಿರ್ವಹಿಸಬೇಕು.

ಈದ್ ದಿನದ ಸಂತೋಷದಲ್ಲಿ ಅನಾಥರನ್ನೂ ನಿರ್ಗತಿಕರನ್ನೂ ಬಡವರನ್ನೂ ಗಮನಿಸಿ ಅವರಿಗೆ ಸಹಾಯ ನೀಡಬೇಕು. ಈದ್ ದಿನದಂದು ಅವರ ಬಗ್ಗೆ ವಿಶಿಷ್ಟ ಶ್ರದ್ಧೆ ನೀಡಬೇಕು. ಇದಕ್ಕೆ ಸಂಬಂಧಿಸಿ ನಮ್ಮ ಜಮಾಅತಿನಲ್ಲಿ ಸಹಾಯ ಮಾಡುವ ಕೆಲವು ಫಂಡ್‌ಗಳಿವೆ. ಶಾದಿ ಫಂಡ್ ಇದೆ. ರೋಗಿಗಳಿಗೆ ಸಹಾಯ ನೀಡುವ ಫಂಡ್ ಇದೆ. ವಿದ್ಯಾರ್ಥಿಗಳಿಗೆ ಸಹಾಯ ನೀಡುವ ಫಂಡ್ ಇದೆ. ಈ ಫಂಡ್‌ಗಳಿಗೆ ದೇಣಿಗೆ ನೀಡಲು ಸಾಧ್ಯವಿರುವವರು ದೇಣಿಗೆ ನೀಡಬೇಕು.

ಕೇವಲ ಈದ್ ದಿನದಂದು ಮಾತ್ರವಲ್ಲ ವರ್ಷದ ಪ್ರತಿಯೊಂದು ತಿಂಗಳಲ್ಲೂ ಅನಾಥರಿಗೆ, ನಿರ್ಗತಿಕರಿಗೆ, ಬಡವರಿಗೆ ಸಹಾಯ ನೀಡಬೇಕು. ಇದೇ ರೀತಿ ನೆರೆಹೊರೆಯವರ ಬಗ್ಗೆ ಸಹ ಶ್ರದ್ಧೆ ವಹಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಮ್ಮೆ ಹೀಗೆ ಹೇಳಿದ್ದರು: ನೂರು ಮನೆಗಳಷ್ಟು ತನಕ ನಮ್ಮ ನೆರೆಹೊರೆಯವರಾಗಿದ್ದಾರೆ. ಆದುದರಿಂದ ನೆರೆಹೊರೆಯವರ ಹಕ್ಕುಗಳ ಬಗ್ಗೆ ಸಹ ಲಕ್ಷ್ಯ ನೀಡಬೇಕು. ಅವರಿಗೆ ಯಾವುದೇ ರೀತಿಯ ಕಷ್ಟ ನಮ್ಮಿಂದ ತಲಪಬಾರದು. ನಮ್ಮೊಂದಿಗೆ ಕೆಲಸ ಮಾಡುವವರ ನಮ್ಮ ಅಧೀನದಲ್ಲಿರುವವರ ಮತ್ತು ಬಲಹೀನರ ಹಕ್ಕುಗಳನ್ನು ಈಡೇರಿಸುವ ಬಗ್ಗೆ ಮತ್ತು ಅವರೊಂದಿಗೆ ಉತ್ತಮವಾಗಿ ವರ್ತಿಸುವ ಬಗ್ಗೆ ಆಜ್ಞೆ ನೀಡಲಾಗಿದೆ.

ಈದ್ ದಿನದಂದು ಲೋಕದ ಬಗ್ಗೆ ಸಹ ಚಿಂತಿಸಬೇಕು. ಲೋಕಕ್ಕೋಸ್ಕರ ಸಹ ಪ್ರಾರ್ಥಿಸಬೇಕು. ನಾವು ನಮ್ಮ ಸಂತೋಷದಲ್ಲಿ ಮಾತ್ರ ತೃಪ್ತರಾಗಬಾರದು. ಲೋಕ ವಿನಾಶದ ಕಡೆಗೆ ಸಾಗುತ್ತಿದೆ. ಲೋಕವನ್ನು ರಕ್ಷಿಸುವುದು ಸಹ ನಮ್ಮ ಹೊಣೆಗಾರಿಕೆಯಾಗಿದೆ. ಲೋಕದಲ್ಲಿ ಹೀಗೆ ಸಂಭವಿಸುತ್ತಿರುವುದರ ಕಾರಣವೇನೆಂದರೆ ಲೋಕದಲ್ಲಿ ಜನರ ಹಕ್ಕುಗಳನ್ನು ಈಡೇರಿಸಿಕೊಡುವ ಬಗ್ಗೆ ಗಮನ ಹರಿಸಲ್ಪಡುವುದಿಲ್ಲ. ಲೋಕದಲ್ಲಿ ಪರಸ್ಪರ ಜನರ ಹಕ್ಕುಗಳನ್ನು ಈಡೇರಿಸಿ ಕೊಡಲ್ಪಡುತ್ತಿದ್ದರೆ ಇರಾಖ್, ಸಿರಿಯಾ, ಅಫ್‌ಘಾನಿಸ್ಥಾನ್ ಮೊದಲಾದ ದೇಶಗಳಲ್ಲಿ ವಿನಾಶಗಳನ್ನು ನಾವು ಕಾಣುತ್ತಿರಲಿಲ್ಲ. ಆಟಂ ಆಯುಧಗಳು ಬಳಸಲ್ಪಡಲಾರವು ಎಂಬ ಶುಭ ಪ್ರತೀಕ್ಷೆ ಮಾಡಲಾಗುತ್ತಿದೆ. ಅದರ ಬಗ್ಗೆ ಮಾತುಗಳು ಕೇಳಲಾಗುತ್ತಿದ್ದರೂ ಯಾರೂ ಅದರ ಬಗ್ಗೆ ಖಾತರಿ ನೀಡಲಾರರು. ಹೇಗಿದ್ದರೂ ಅದರ ಪರಿಣಾಮ ಅತ್ಯಂತ ಅಪಾಯಕರವಾಗುವುದು. ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸಿಕೊಡುವ ಬಗ್ಗೆ ಜನರ ಗಮನ ಹರಿಸುವುದು ಅಹ್ಮದಿಯರ ಹೊಣೆಗಾರಿಕೆಯಾಗಿದೆ. ಸೋಶಿಯಲ್ ಮೀಡಿಯಾದಲ್ಲಿ ನಿರರ್ಥಕ ವಿಷಯಗಳನ್ನು ಪ್ರಸ್ತಾಪಿಸುತ್ತಾ ಸಮಯವನ್ನು ವ್ಯರ್ಥಗೊಳಿಸುವುದಕ್ಕೆ ಬದಲಾಗಿ ಜನರನ್ನು ದೇವನ ಕಡೆಗೆ ಕರೆಯುವ ಆಮಂತ್ರಣ ನೀಡಬೇಕು. ಅಲ್ಲಾಹನ ಆಜ್ಞೆಗಳ ಪಾಲನೆಯಿಂದಲೇ ಲೋಕದಲ್ಲಿ ಶಾಂತಿ ಸ್ಥಾಪಿತವಾಗುವುದು ಎಂದು ಜನರಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಬೇಕು. ಈ ವಿಧಾನದಿಂದ ತಬ್ಲೀಗ್ ಮಾಡಲು ಹೊಸ ಮಾರ್ಗಗಳು ತೆರೆಯಲ್ಪಡುವುದು.

ಹುಝೂರ್ ಅಯ್ಯದಹುಲ್ಲಾಹು ತಆಲಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಒಂದು ಉದ್ಧರಣಿಯನ್ನು ಉಲ್ಲೇಖಿಸುತ್ತಾ ಹೇಳಿದರು: ಇಸ್ಲಾಮ್ ಮತ್ತು ಖುರ್‌ಆನ್ ಲೋಕದಲ್ಲಿ ಹರಡುವುದಾದರೆ ನಮ್ಮ ಈದ್‌ಗಳಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹ ಭಾಗವಹಿಸುವರು.

ನಾವು ಅಲ್ಲಾಹನನ್ನು ಆರಾಧಿಸುವ ಹಕ್ಕನ್ನು ಈಡೇರಿಸುವವರಾಗಬೇಕು. ನಾವು ನಮ್ಮ ಮಕ್ಕಳೊಂದಿಗೆ ಸಹ ಹೇಳಬೇಕು ಅವರು ಆರಾಧನೆ ಮಾಡುವವರಾಗಬೇಕು ಎಂದು. ಅವರು ಜನರ ಹಕ್ಕುಗಳನ್ನು ಈಡೇರಿಸಿಕೊಡುವವರಾಗಬೇಕು. ಇಸ್ಲಾಮ್ ಮತ್ತು ಪವಿತ್ರ ಖುರ್‌ಆನಿನ ಉಪದೇಶಗಳನ್ನು ಲೋಕದಲ್ಲಿ ಹರಡಲು ಅವರು ಧಾರಾಳವಾಗಿ ಪ್ರಯತ್ನಿಸುವವರಾಗಬೇಕು. ಆತ್ಮದ ಈ ಮನೋಭಾವ ಪೀಳಿಗೆಗಳಿಂದ ಪೀಳಿಗೆಗಳಿಗೆ ವರ್ಗಾಯಿಸುವಂತಹದಾಗಬೇಕು. ಆತ್ಮದ ಈ ಮನೋಭಾವವನ್ನು ನಾವು ಮುಂದಿನ ಪೀಳಿಗೆಗೆ ವರ್ಗಾಯಿಸಬೇಕು. ಲೋಕದಾದ್ಯಂತ ಇಸ್ಲಾಮ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಧ್ವಜ ಹಾರಾಡಲು ಪ್ರಾರಂಭವಾಗುವ ತನಕ ನಾವು ನೆಮ್ಮದಿಯಿಂದ ಕುಳಿತಿರಲಾರೆವು. ಅಲ್ಲಾಹನು ನಮಗೆ ಹಾಗೆ ಮಾಡುವ ಭಾಗ್ಯವನ್ನು ದಯಪಾಲಿಸುವವನಾಗಲಿ. ನಾವು ಅಂತಹ ಈದ್‌ಗಳ ದೃಶ್ಯಗಳನ್ನು ಕಾಣುವವರಾಗುವಂತೆ ಅಲ್ಲಾಹನು ಮಾಡಲಿ. ಅಂತಹ ಈದ್‌ಗಳನ್ನು ಗಳಿಸಲು ನಾವು ನಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳನ್ನೂ ಪ್ರಯತ್ನಗಳನ್ನೂ ಸಕ್ರಿಯಗೊಳಿಸುವ ಭಾಗ್ಯವನ್ನು ಅಲ್ಲಾಹನು ದಯಪಾಲಿಸುವವನಾಗಲಿ.

**(ಖುತ್‌ಬ ಈದುಲ್ ಫಿತರ್, ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಅ), ಮೇ 2, 2022)**

**ಸೂಚನೆ::** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ 'ಮಸ್ಜಿದ್ ಮುಬಾರಕ್' ನಿಂದ ಖುತ್‌ಬ ಜುಮುಅವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ.

## ವಿಶೇಷ ಪ್ರಕಟಣೆ

**ಇಸ್ಲಾಮ್ ಧರ್ಮದ ಹಾಗೂ ಅದರ ವಿಶ್ವಾಸದ ಮೂಲ ಸ್ತಂಭಗಳನ್ನು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಹೃತ್ಪೂರ್ವಕವಾಗಿ ನಂಬುತ್ತದೆ ಮತ್ತು ಅವುಗಳನ್ನು ಪಾಲಿಸುತ್ತದೆ.**

**ಸಂಪೂರ್ಣ ನಂಬಿಕೆ, ದೃಢವಿಶ್ವಾಸ ಹಾಗೂ ಪರಿಪೂರ್ಣ ಜ್ಞಾನದೊಂದಿಗೆ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವ ಸಲ್ಲಮರನ್ನು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಖಾತಮನ್ನಬಿಯೀನ್ ಎಂದು ನಂಬುತ್ತದೆ.**

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ವಿರುದ್ಧ ಪತ್ರಿಕೆಗಳಲ್ಲಿ ಸತ್ಯಕ್ಕೆ ವಿರುದ್ಧವಾದ ಲೇಖನಗಳನ್ನು ಪ್ರಕಟಿಸಲಾಗುತ್ತದೆ ಮತ್ತು ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರನ್ನು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಖಾತಮನ್ನಬಿಯೀನ್ ಎಂದು ನಂಬದೇ ಇರುವ ಕಾರಣದಿಂದ ಅದನ್ನು ಇಸ್ಲಾಮ್ ಧರ್ಮದ ವಲಯದಿಂದ ಹೊರ ಇಡಲಾಗಿದೆ ಎಂದೂ ಅದು ಬ್ರಿಟೀಷರ ಏಜೆಂಟ್ ಆಗಿದೆ ಎಂದೂ ಅದರ ವಿರುದ್ಧ ಪ್ರಚಾರ ಮಾಡಲಾಗುತ್ತದೆ. **(ನಊಧುಬಿಲ್ಲಾಹ್)**

ಪತ್ರಿಕೆಗಳಲ್ಲಿ ಪ್ರಕಟವಾಗುವ ಈ ಆರೋಪಗಳು ಅಪ್ಪಟ ಸುಳ್ಳು ಮತ್ತು ಆಧಾರರಹಿತವಾಗಿವೆ ಹಾಗೂ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಕುರಿತು ಮಾಡಲಾಗುವ ದೊಡ್ಡ ಅಪಪ್ರಚಾರವಾಗಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರನ್ನು ಖಾತಮನ್ನಬಿಯೀನ್ ಎಂದು ಸಂಪೂರ್ಣ ನಂಬಿಕೆ, ದೃಢವಿಶ್ವಾಸ, ಮತ್ತು ಪರಿಜ್ಞಾನದಿಂದ ನಂಬುತ್ತದೆ ಹಾಗೂ ಹಝ್ರತ್ ಪೈಗಂಬರರಿಗೆ(ಸ) ಸರ್ವಶಕ್ತನಾದ ಅಲ್ಲಾಹನು ನೀಡಿರುವ ಖಾತಮನ್ನಬಿಯೀನಿನ ಕಿರೀಟವನ್ನು ಕಿತ್ತುಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲವೆಂದು ಅದು ಘೋಷಿಸುತ್ತದೆ.

ಅಹ್ಮದಿಯಾ ಜಮಾಅತಿನ ಸಂಸ್ಥಾಪಕರಾದ ಹಝ್ರತ್ ಮಿರ್ಝಾ ಗ್ಹುಲಾಂ ಅಹ್ಮದ್ ಸಾಹಿಬ್(ಅ) ತಮ್ಮನ್ನು ಸ್ವತಃ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ಸಲ್ಲಮ್‌ರಿಗಿಂತ ಮಿಗಿಲು ಎಂದು ಭಾವಿಸುತ್ತಾರೆ ಎಂದು ಅದರ ವಿರೋಧಿಗಳು ಮತ್ತು ಅವರ ತಥಾಕಥಿತ ವಿದ್ವಾಂಸರು ಅದರ ವಿರುದ್ಧ ಇತರ ಮುಸ್ಲಿಮರ ಭಾವನೆಗಳನ್ನು ಕೆರಳಿಸಲು ಆಪಾದಿಸುತ್ತಾರೆ. ಇದೇ ಆಪಾದನೆಯನ್ನು ಈ ಜನರು ಇಂದು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸದಸ್ಯರ ವಿರುದ್ಧವೂ ಹೊರಿಸುತ್ತಾರೆ. ಆದರೆ ಇದು ಅಪ್ಪಟ ಸುಳ್ಳು ಆಪಾದನೆಯಾಗಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರು ತಮ್ಮನ್ನು ಸ್ವತಃ ಖಾತಮುನ್ನಬಿಯ್ಯೀನ್‌ರಾದ ಹಝ್ರತ್ ಮುಹಮ್ಮದ್ ಮುಸ್ತಫಾರ(ಸ) ನೈಜ ಸೇವಕ ಹಾಗೂ ಗುಲಾಮ ಎಂದು ಸಾರಿದ್ದಾರೆ ಮತ್ತು ತಮ್ಮ ಆಗಮನದ ಮೂಲೋದ್ದೇಶ ಇಸ್ಲಾಮ್ ಧರ್ಮ ಹಾಗೂ ಅದರ ಸ್ಥಾಪಕರಾದ ಹಝ್ರತ್ ಪೈಗಂಬರರ(ಸ) ವೈಭವ ಹಾಗೂ ಶ್ರೇಷ್ಠತೆಯನ್ನು ಸ್ಥಾಪಿಸುವುದಾಗಿದೆ ಎಂದು ಹೇಳಿದ್ದಾರೆ. ಹಝ್ರತ್ ಪೈಗಂಬರರ(ಸ) ಪ್ರವಾದಿತ್ವದ ಘನತೆಯನ್ನು ಅಹ್ಮದಿಯಾ ಜಮಾಅತಿನ ಸ್ಥಾಪಕರು ಎಷ್ಟು ಭವ್ಯವಾದ ರೀತಿಯಲ್ಲಿ ಕಾಪಾಡಿದರು ಎಂಬುದಕ್ಕೆ ಅವರ ಇಡೀ ಜೀವನವೇ ಸಾಕ್ಷಿ. ಅವರು ಪ್ರವಾದಿತ್ವದ ಘನತೆ ಮತ್ತು ದೇವನ ಏಕತ್ವದ ಹಿರಿಮೆಯನ್ನು ಸ್ಥಾಪಿಸಲಿಕ್ಕಾಗಿ ಮಾತು, ಕೃತ್ಯರೂಪದ ಮತ್ತು ಪ್ರಾಯೋಗಿಕವಾದ ಉದಾಹರಣೆಗಳನ್ನು ಸ್ಥಾಪಿಸಿದರು. ಮಾತ್ರವಲ್ಲ, ಅಹ್ಮದಿಯಾ ಖಿಲಾಫತಿನ ದೈವಿಕ ಮಾರ್ಗದರ್ಶನದ ಅಧೀನದಲ್ಲಿ ಇಡೀ ಜಗತ್ತಿನಲ್ಲಿ ರಸೂಲುಲ್ಲಾಹ್‌ರ(ಸ) ಮಹಿಮೆಯನ್ನು ಸ್ಥಾಪಿಸುವ ಸಕ್ರಿಯ ಜಮಾಅತನ್ನು ಸ್ಥಾಪಿಸಿದರು. ಅವರು ತಮ್ಮ ಗ್ರಂಥಗಳಲ್ಲಿ ನಾಮೂಸೆ ರಿಸಾಲತಿನ (ಪ್ರವಾದಿತ್ವದ ಘನತೆ) ಸ್ಥಾಪನೆ ಮತ್ತು ಶ್ರೇಷ್ಠತೆಯ ಬಗ್ಗೆ ಹೀಗೆ ಹೇಳುತ್ತಾರೆ:

"ಈಗ ಆಕಾಶದ ಕೆಳಗೆ ಒಬ್ಬರೇ ಪ್ರವಾದಿ ಇರುವರು ಮತ್ತು ಒಂದೇ ಗ್ರಂಥವಿರುವುದು. ಎಂದರೆ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು. ಅವರು ಸಕಲ ಪ್ರವಾದಿಗಳಲ್ಲಿ ಅತ್ಯುನ್ನತರೂ ಅತ್ಯುತ್ತಮರೂ ಅತ್ಯಂತ ಪರಿಪೂರ್ಣರೂ ಪ್ರವಾದಿಗಳ ಮುದ್ರೆಯೂ ಹಾಗೂ ಎಲ್ಲ ಮನುಷ್ಯರಿಗಿಂತ ಅತ್ಯುತ್ತಮರೂ ಆಗಿದ್ದಾರೆ. ಅವರನ್ನು ಅನುಸರಿಸುವುದರಿಂದ ಅತ್ಯುನ್ನತನಾದ ಅಲ್ಲಾಹನು ಲಭಿಸುವುದು ಮತ್ತು ಅಂಧಕಾರದ ಮುಸುಕುಗಳು ತೆರೆಯಲ್ಪಡುವುವು ಹಾಗೂ ಇಹಲೋಕದಲ್ಲೇ ನಿಜವಾದ ಮೋಕ್ಷದ ಚಿಹ್ನೆಗಳು ವ್ಯಕ್ತವಾಗುವುವು." **(ಬರಾಹೀನೆ ಅಹ್ಮದಿಯಾ ಭಾಗ 4, ರೂಹಾನಿ ಖಝಾಯಿನ್ ಸಂಪುಟ 1, ಪುಟ 557–558, ಅಡಿಟಿಪ್ಪಣಿ ಸಂಖ್ಯೆ 3)**

ಅವರು ಹೀಗೂ ಹೇಳುತ್ತಾರೆ: "ನಾವು ನ್ಯಾಯ ನೀತಿಯ ದೃಷ್ಟಿಯಿಂದ ಎಲ್ಲ ಪ್ರವಾದಿಗಳನ್ನು ನೋಡಿದರೆ ಅವರಲ್ಲಿ ಎಲ್ಲರಿಗಿಂತಲೂ ಧೈರ್ಯಶಾಲಿಯೂ ಚೈತನ್ಯಶಾಲಿಯೂ ದೇವನಿಂದ ಅತ್ಯಂತ ಹೆಚ್ಚು ಪ್ರೀತಿಸಲ್ಪಟ್ಟವರೂ ಆದ ಪ್ರವಾದಿಯಾಗಿ ನಾವು ಒಬ್ಬರನ್ನು ಮಾತ್ರ ಕಾಣುತ್ತೇವೆ. ಅವರೇ ಪ್ರವಾದಿಗಳ ನಾಯಕರಾದ ಹಝ್ರತ್ ಮುಹಮ್ಮದ್ ಮುಸ್ತಫಾ, ಅಹ್ಮದ್ ಮುಜ್ತಬಾ ಸಲ್ಲಲ್ಲಾಹು ಅಲೈಹಿ ವಸಲ್ಲಮ್. ಅವರ ನೆರಳಿನಲ್ಲಿ ಹತ್ತು ದಿನ ನಡೆಯುವುದರಿಂದ ಸಾವಿರಾರು ವರ್ಷಗಳ ವರೆಗೂ ಸಿಗದ ಪ್ರಕಾಶ ಲಭಿಸುವುದು." **(ಸಿರಾಜೆ ಮುನೀರ್; ರೂಹಾನೀ ಖಝಾಇನ್ ಸಂಪುಟ 12, ಪುಟ 82)**

ಹಝ್ರತ್ ಮುಹಮ್ಮದ್ ಮುಸ್ತಫಾರ(ಸ) ಅತ್ಯುನ್ನತ ಮತ್ತು ಶ್ರೇಷ್ಠ ಸ್ಥಾನದ ಬಗ್ಗೆ ಈ ಮಾತುಗಳನ್ನು ಹೇಳುತ್ತಿರುವ ವ್ಯಕ್ತಿ ಅಥವಾ ಅವರ ಜಮಾಅತ್ ಹೇಗೆ ತಾನೆ ಹಝ್ರತ್ ಪೈಗಂಬರರ(ಸ) ಮೇಲೆ ಬೇರೆಯವರಿಗೆ ಸ್ಥಾನವನ್ನು ಕಲ್ಪಿಸಿಕೊಳ್ಳಲು ಸಾಧ್ಯ? ಖಂಡಿತವಾಗಿಯೂ ಇಲ್ಲ, ಬದಲಿಗೆ ಇದು ಅಹ್ಮದಿಯಾ ಜಮಾಅತಿನ ವಿರುದ್ಧ ಅಪ್ಪಟ ಸುಳ್ಳು ಮತ್ತು ನಿರಾಧಾರ ಆರೋಪವಾಗಿದೆ.

ಇದಲ್ಲದೆ, ಅಹ್ಮದಿಯಾ ಮುಸ್ಲಿಮ್ ಜಮಾಅತ್ ಬ್ರಿಟಿಷರು ನೆಟ್ಟು ಬೆಳೆಸಿದ ಗಿಡವಾಗಿದೆ ಎಂಬ ಆಕ್ಷೇಪವೂ ಅದರ ವಿರುದ್ಧ ಹೊರಿಸಲಾಗುತ್ತದೆ. ಅದರ ವಿರುದ್ಧ ಹೊರಿಸಲಾಗುವ ಈ ಆಕ್ಷೇಪ ಕೂಡ ಪೂರ್ಣವಾಗಿಯೂ ತಪ್ಪಾಗಿದೆ. ಅಹ್ಮದಿಯಾ ಜಮಾಅತಿನ ಸ್ಥಾಪಕರು ತಮ್ಮ ಬರಹಗಳಲ್ಲಿ ಎಲ್ಲಿಯೂ ಈ ಜಮಾಅತಿಗೆ ಬ್ರಿಟಿಷರೊಂದಿಗೆ ಸಂಬಂಧವಿರುವುದಾಗಿ ಹೇಳಿಲ್ಲ. ಇದಕ್ಕೆ ವಿರುದ್ಧವಾಗಿ, ಅವರು ತಮ್ಮ ಬರಹಗಳ ಮೂಲಕ ಕ್ರೈಸ್ತರನ್ನು ಧೈರ್ಯದಿಂದ ಎದುರಿಸಿದರು ಮತ್ತು ಕ್ರೈಸ್ತ ಧರ್ಮದ ಭಾಗವಾಗಿರುವ ಎಲ್ಲ ಸುಳ್ಳು ನಂಬಿಕೆಗಳನ್ನು ಖಂಡಿಸಿದರು. ಇದಲ್ಲದೆ, ಅವರು ಅನೇಕ ಆಂಗ್ಲೇಯ ಪಾದ್ರಿಗಳೊಂದಿಗೆ ಧಾರ್ಮಿಕ ಸಂವಾದಗಳನ್ನು ನಡೆಸಿ ಅವರನ್ನು ಪರಾಜಿತಗೊಳಿಸಿದರು. ಹೀಗಿರುವಾಗ ಕ್ರೈಸ್ತ ಧರ್ಮವನ್ನು ಮಿಥ್ಯೆ ಎಂದು ಸಾರಿದ ಅಹ್ಮದಿಯಾ ಜಮಾಅತನ್ನು ಆಂಗ್ಲೇಯರು ನೆಟ್ಟು ಬೆಳೆಸಿದ ಗಿಡವೆಂದು ಹೇಳುವುದು ಮೂರ್ಖತನವಲ್ಲದೇ ಮತ್ತೇನು?

ಹಾಗೆಯೇ ಅಹ್ಮದಿಯಾ ಜಮಾಅತ್ ಪರಿಶುದ್ಧ ಕಲಿಮವಾದ **ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್** (ಅಲ್ಲಾಹನಲ್ಲದೆ ಬೇರೆ ದೇವನಿಲ್ಲ. ಮುಹಮ್ಮದ್ ಅವನ ಪ್ರವಾದಿ) ಎಂಬುದನ್ನು, ಪವಿತ್ರ ಖುರ್‌ಆನ್ ಮತ್ತು ಹದೀಸನ್ನು ನಂಬುವುದಿಲ್ಲ ಎಂದು ಹೇಳುವುದು ಕೂಡ ಮಹಾ ಸುಳ್ಳಾರೋಪವಾಗಿದೆ. ಈ ಆಕ್ಷೇಪಣೆಗೆ ಪ್ರತಿಕ್ರಿಯೆಯಾಗಿ, ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರಾದ ಹಝ್ರತ್ ಮಸೀಹ್ ಮೌಊದ್‌ರ(ಅ) ಈ ಬರಹ ಸಾಕು. ಅವರು ಹೇಳುತ್ತಾರೆ:

"**ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್**. ಇದು ನಮ್ಮ ಧರ್ಮದ ಸಾರಾಂಶವಾಗಿದೆ. ನಾವು ನಂಬಿಕೊಂಡು ಬಂದಿರುವುದು ಮತ್ತು ದೇವನ ಅನುಗ್ರಹದಿಂದ ನಂಬುತ್ತಾ ಈ ನಶ್ವರ ಲೋಕದಿಂದ ನಾವು ಅಗಲಿ ಹೋಗಲಿರುವುದು ಈ ವಿಶ್ವಾಸದೊಂದಿಗೆ ಆಗಿದೆ. ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) **ಖಾತಮುನ್ನಬಿಯ್ಯೀನ್** (ಪ್ರವಾದಿಗಳ ಮುದ್ರೆ) ಮತ್ತು **ಖೈರುಲ್ ಮುರ್‌ಸಲೀನ್** (ಪ್ರವಾದಿಗಳಲ್ಲಿ ಅತ್ಯಂತ ಶ್ರೇಷ್ಠ) ಆಗಿದ್ದಾರೆ. ಅವರ ಹಸ್ತಗಳಿಂದ ಧರ್ಮವನ್ನು ಪರಿಪೂರ್ಣಗೊಳಿಸಲಾಗಿದೆ. ಪರಿಪೂರ್ಣತೆಗೆ ತಲುಪಿದ ಈ ಅನುಗ್ರಹದ ಮೂಲಕ ಮನುಷ್ಯನು ನೇರವಾದ ಮಾರ್ಗವನ್ನು ಅವಲಂಬಿಸಿ ದೇವನ ಸಮೀಪಕ್ಕೆ ತಲುಪಲು ಸಾಧ್ಯ. ಪವಿತ್ರ ಖುರ್‌ಆನ್ ಎಲ್ಲ ದೈವಿಕ ಗ್ರಂಥಗಳಲ್ಲಿ ಅತ್ಯಂತ ಶ್ರೇಷ್ಠವಾದುದು (**ಖಾತಮುಲ್ ಕುತುಬ್**) ಎಂದು ನಾವು ನಂಬುತ್ತೇವೆ. ಅದರ ಉಪದೇಶಗಳು, ಅದರ ಆಜ್ಞೆಗಳು, ಅದು ನಿಷಿದ್ಧಗೊಳಿಸಿದ ಕಾರ್ಯಗಳು, ಅದು ಕಡ್ಡಾಯಗೊಳಿಸಿದ ಕಾರ್ಯಗಳು – ಇವುಗಳಲ್ಲಿ ಒಂದಿಷ್ಟು ಕೂಡ ಹೆಚ್ಚು ಕಮ್ಮಿ ಆಗಲಾರದು." **(ಇಝಾಲೇ ಔಹಾಮ್; ರೂಹಾನೀ ಖಝಾಯಿನ್, ಸಂಪುಟ 3, ಪುಟ 169 – 170)**

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ನಂಬಿಕೆಯ ಪ್ರಕಾರ, ಬನೀ ಇಸ್ರಾಈಲರಿಗೆ ಮಾರ್ಗದರ್ಶನ ನೀಡಲು ಕಳುಹಿಸಲ್ಪಟ್ಟಿದ್ದರು ಎಂದು ಪವಿತ್ರ ಖುರ್‌ಆನ್ ಹೇಳಿರುವ ಹಝ್ರತ್ ಈಸಾ ಮಸೀಹ್(ಅ) ಪವಿತ್ರ ಖುರ್‌ಆನಿನ ಸಾಕ್ಷ್ಯದ ಪ್ರಕಾರ ನಿಧನಗೊಂಡಿರುವರು. ಪವಿತ್ರ ಖುರ್‌ಆನಿನ 30ಕ್ಕೂ ಹೆಚ್ಚು ಸ್ಪಷ್ಟವಾದ ವಚನಗಳು ಈ ಸತ್ಯಕ್ಕೆ ಸಾಕ್ಷಿಯಾಗಿದೆ. **ಯಾ ಈಸಾ ಇನ್ನೀ ಮುತವಫ್ಫೀಕ** (ಪವಿತ್ರ ಖುರ್‌ಆನ್, 3:56) ಅಂದರೆ ಎಲೈ ಈಸಾ! ಖಂಡಿತವಾಗಿಯೂ ನಾನು ನಿನ್ನನ್ನು ಮೃತಪಡಿಸುವೆನು ಎಂದು ಅಲ್ಲಾಹನು ಹೇಳಿದ್ದಾಗಿ ಪವಿತ್ರ ಖುರ್‌ಆನಿನಲ್ಲಿ ಪ್ರಸ್ತಾಪಿಸಲಾಗಿದೆ. ಅದೇ ರೀತಿಯಲ್ಲಿ **ಫಲಮ್ಮಾ ತವಫ್ಫೈತನೀ** (ಪವಿತ್ರ ಖುರ್‌ಆನ್, 5:118) ಅಂದರೆ, ನೀನು (ಅಲ್ಲಾಹನು) ನನಗೆ ಮರಣ ನೀಡಿದಾಗ ಎಂದು ಹಝ್ರತ್ ಈಸಾ(ಅ) ಹೇಳುವುದಾಗಿಯೂ ಪವಿತ್ರ ಖುರ್‌ಆನಿನಲ್ಲಿ ಪ್ರಸ್ತಾಪವಿದೆ. ಅದೇ ರೀತಿ ಪವಿತ್ರ ಖುರ್‌ಆನ್ ಹಝ್ರತ್ ಮುಹಮ್ಮದ್ ಮುಸ್ತಫಾರ(ಸ) ಬಗ್ಗೆ ಈ ರೀತಿ ಹೇಳಿದೆ, **ವಮಾ ಮುಹಮ್ಮದುನ್ ಇಲ್ಲಾ ರಸೂಲ್ ಖದ್ ಖಲತ್ ಮಿನ್**

**ಖಬ್ಲಿಹಿರ್ರುಸುಲ್** (ಪವಿತ್ರ ಖುರ್‌ಆನ್, 3:145) ಅಂದರೆ ಹಝ್ರತ್ ಮುಹಮ್ಮದ್(ಸ) ಕೇವಲ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲ ಸಂದೇಶವಾಹಕರೂ ಗತಿಸಿದ್ದಾರೆ. ಖಾತಮನ್ನಬಿಯೀನ್ ಹಝ್ರತ್ ಮುಹಮ್ಮದ್(ಸ) ಈ ನಶ್ವರ ಪ್ರಪಂಚವನ್ನು ಬಿಟ್ಟು ಹೋಗಿರುವಾಗ ಬೇರೊಬ್ಬ ಪ್ರವಾದಿಯನ್ನು ಜೀವಂತವಾಗಿ ಇರಿಸುವುದರಲ್ಲಿ ಇರುವ ರಹಸ್ಯವಾದರೂ ಏನು? ಹಝ್ರತ್ ಮುಹಮ್ಮದ್ ಮುಸ್ತಫಾರಿಗಿಂತ(ಸ) ಮುಂಚಿನ ಎಲ್ಲ ಪ್ರವಾದಿಗಳು ಮೃತಪಟ್ಟಿರುವರು ಎಂಬುದರ ಬಗ್ಗೆ ಎಲ್ಲ ಸಹಾಬಿಯರು ಒಮ್ಮತಾಭಿಪ್ರಾಯ ಹೊಂದಿದ್ದರು ಎಂಬುದಕ್ಕೆ ಹದೀಸ್ ಮತ್ತು ಚರಿತ್ರೆಯ ಗ್ರಂಥಗಳಲ್ಲಿ ಪುರಾವೆಗಳಿವೆ. ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ನಿಧನಗೊಂಡಾಗ ಹಝ್ರತ್ ಉಮರ್(ರ) ತನ್ನ ಖಡ್ಗವನ್ನು ಎತ್ತಿ “ಯಾರಾದರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನಗೊಂಡಿರುವರು ಎಂದು ಹೇಳಿದರೆ ಅವರ ತಲೆಯನ್ನು ಕತ್ತರಿಸುವೆನು ಎಂದು ಹೇಳಿದಾಗ ಹಝ್ರತ್ ಅಬೂಬಕರ್ ಸಿದ್ದೀಖ್(ರ) ಇದೇ ವಚನವನ್ನು ಪಠಿಸಿದ್ದರು. ಅಂದರೆ ಮುಹಮ್ಮದ್(ಸ) ಕೇವಲ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲ ಪ್ರವಾದಿಗಳು ಗತಿಸಿದ್ದಾರೆ.

ಇಸ್ಲಾಮ್ ಪರಿಪೂರ್ಣ ಧರ್ಮವಾಗಿದೆ ಎಂಬುದನ್ನು ನೆನಪಿಡಿರಿ. ಆದಾಗ್ಯೂ ಮುಸ್ಲಿಮರ ದುರವಸ್ಥೆಯ ಬಗ್ಗೆ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಭವಿಷ್ಯ ನುಡಿದಿದ್ದರು: ಈಮಾನ್ ಕೃತ್ತಿಕಾ ನಕ್ಷತ್ರಕ್ಕೆ ಹೊರಟುಹೋಗುವ ಸಮಯ ಬರುವುದು (ಎಂದರೆ ಸತ್ಯವಿಶ್ವಾಸ ಜನರ ಹೃದಯಗಳಲ್ಲಿ ಇಲ್ಲವಾಗುವ ಸಮಯ) ಆಗ ಪರ್ಶಿಯಾದ ಓರ್ವ ವ್ಯಕ್ತಿ ಈಮಾನನ್ನು ಜಗತಿಗೆ ಮರಳಿ ತರುವನು (ಸಹೀಹ್ ಬುಖಾರಿ)

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸಂಸ್ಥಾಪಕ, ಹಝ್ರತ್ ಮಿರ್ಝಾ ಗ್ಹುಲಾಮ್ ಅಹ್ಮದ್ ಸಾಹಿಬ್, ವಾಗ್ದಾತ್ತ ಮಸೀಹ್ ಹಾಗೂ ಮಹ್‌ದಿ ಅಲೈಹಿಸ್ಸಲಾಮ್ ಯಾವುದೇ ಪ್ರತ್ಯೇಕ ಪ್ರವಾದಿತ್ವ ಅಥವಾ ನಿಯಮಸಂಹಿತೆಯನ್ನು ತಂದದ್ದಾಗಿ ವಾದಿಸಿಲ್ಲ. ಬದಲಾಗಿ ಸೂರಾ ಅನ್ನಿಸಾದ ವಚನದ ಪ್ರಕಾರ, ಹಝ್ರತ್ ಮುಹಮ್ಮದ್ ಮುಸ್ತಫಾರ(ಸ) ಪರಿಪೂರ್ಣ ವಿಧೇಯತೆ ಮತ್ತು ಪರಿಪೂರ್ಣ ಅನುಸರಣೆಯ ಪರಿಣಾಮವಾಗಿ ಹಾಗೂ ಹಝ್ರತ್ ಪೈಗಂಬರರ(ಸ) ನೈಜ ಸೇವಕ ಮತ್ತು ಗುಲಾಮರಾಗಿದ್ದ ಕಾರಣದಿಂದ ಅವರಿಗೆ ಪ್ರವಾದಿತ್ವದ ಸ್ಥಾನ ಲಭಿಸಿತು. ಇದು ಹಝ್ರತ್ ಮುಹಮ್ಮದ್ ಮುಸ್ತಫಾರ(ಸ) ಮಹಿಮೆಯನ್ನು ಹೆಚ್ಚಿಸುತ್ತದೆ. ಹಝ್ರತ್ ಪೈಗಂಬರರ(ಸ) ಅಸ್ತಿತ್ವವು ಒಬ್ಬ ಪ್ರವಾದಿಯನ್ನು ಸೃಷ್ಟಿಸುವಂಥದ್ದಾಗಿದೆ. ಅಂದರೆ, ಹಝ್ರತ್ ಪೈಗಂಬರರನ್ನು(ಸ) ಪರಿಪೂರ್ಣವಾಗಿ ಅನುಸರಿಸುವ ಮೂಲಕ ಒಬ್ಬ ಅನುಯಾಯಿ ಪ್ರವಾದಿತ್ವದ ಸ್ಥಾನಮಾನವನ್ನು ಪಡೆಯಬಹುದಾಗಿದೆ.

ಆದ್ದರಿಂದ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಮತ್ತು ಅದರ ಸಂಸ್ಥಾಪಕರ ಮೇಲೆ ಸುಳ್ಳಾರೋಪ ಹೊರಿಸುವವರು ತಮ್ಮ ಅಸೂಯೆ ಮತ್ತು ಮತಾಂಧತೆಯನ್ನು ತೊರೆದು ವಾಗ್ದತ್ತ ಮಹ್‌ದಿ ಮತ್ತು ಮಸೀಹ್‌ರಾದ ಹಝ್ರತ್ ಮಿರ್ಝಾ ಗ್ಹುಲಾಂ ಅಹ್ಮದ್‌ರ(ಅ) ಬರಹಗಳ ಮತ್ತು ಅಹ್ಮದಿಯಾ ಜಮಾಅತಿನ ನಂಬಿಕೆಗಳ ಕುರಿತು ಗಮನವಿಟ್ಟು ಆಲೋಚಿಸಬೇಕು ಮತ್ತು ಅನ್ವೇಷಣೆ ಹಾಗೂ ಪರಿಪೂರ್ಣ ಜ್ಞಾನವಿಲ್ಲದೆ ಸುಳ್ಳಾರೋಪಗಳನ್ನು ಮಾಡುವುದರಿಂದ ದೂರ ಸರಿಯಬೇಕು ಎಂದು ನಾವು ವಿನಂತಿಸಿಕೊಳ್ಳುತ್ತೇವೆ. ***********

## ಪವಿತ್ರ ರಮಝಾನ್ ಮಾಸಕ್ಕೆ ತಹರೀಕ್ ಜದೀದಿನೊಡನೆ ಘನಿಷ್ಠ ಸಂಬಂಧವಿದೆ.

ತಹ್‌ರೀಕ್ ಜದೀದ್ ಸ್ಥಾಪಕರಾದ ಸಯ್ಯದನಾ ಹಝ್ರತ್ ಖಲೀಫತುಲ್ ಮಸೀಹ್ ಸಾನಿ (ದ್ವಿತೀಯ) (ರ) ಅವರು ಪವಿತ್ರ ರಮಝಾನ್ ಮಾಸ ಮತ್ತು ತಹ್‌ರೀಕ್ ಜದೀದ್‌ಗೆ ಇರುವ ಅನೋನ್ಯ ಸಂಬಂಧಗಳ ಮೇಲೆ ಪ್ರಕಾಶ ಚೆಲ್ಲುತ್ತ ಹೇಳುತ್ತಾರೆ.

“ರಮಝಾನಿನಿಂದ ಲಾಭಾನ್ವಿತರಾಗಬೇಕಾದರೆ ತಹ್‌ರೀಕ್ ಜದೀದ್‌ಗೆ ಮೇಲೆ ನಡೆದುಕೊಳ್ಳಿರಿ. ತಹ್‌ರೀಕ್ ಜದೀದನ್ನು ಬಲಗೊಳಿಸಲು ಬಯಸುವವರಾದರೆ ಉಪವಾಸಗಳಿಂದ ಲಾಭಾನ್ವಿತರಾಗಿರಿ. ತಹ್‌ರೀಕ್ ಜದೀದ್ ಎಂದರೆ ಸರಳ ಜೀವನ ನಡೆಸುವುದು, ಶ್ರಮ ಪಡುವುದು ಮತ್ತು ತ್ಯಾಗ ಭಾವನೆಗಳನ್ನು ರೂಢಿಸಿಕೊಳ್ಳುವುದು. ಈ ಪಾಠವೇ ನಿಮಗೆ ಕಲಿಸಿಕೊಡಲು ರಮಝಾನ್ ಬರುತ್ತದೆ. ಆದುದರಿಂದ ಯಾವ ಉದ್ದೇಶಕ್ಕಾಗಿ ರಮಝಾನ್ ಬಂದಿದೆಯೋ ಆ ಉದ್ದೇಶವನ್ನು ಸಾಧಿಸಲು ಪ್ರಯತ್ನ ಮಾಡಿರಿ. ಪ್ರತಿಯೊಬ್ಬ ವ್ಯಕ್ತಿ ಪ್ರಯತ್ನ ಮಾಡಬೇಕು. ಅವನ ರಮಝಾನ್ ತಹ್‌ರೀಕ್ ಜದೀದ್ ಆಗಿರಬೇಕು. ತಹ್‌ರೀಕ್ ಜದೀದ್ ರೀತಿಯಲ್ಲಿ ಅವನ ರಮಝಾನ್ ಆಗಿರಬೇಕು. ರಮಝಾನ್ ನಮ್ಮ ಆತ್ಮ ವ್ಯಾಮೋಹವನ್ನು ತ್ಯಜಿಸುವಂತಾಗಿರಬೇಕು. ನಾನು ನಿಮಗೆ ರಮಝಾನಿನಿಂದ ಲಾಭಾನ್ವಿತರಾಗಲು ಹೇಳಿದ ಉದ್ದೇಶ ವಾಸ್ತವದಲ್ಲಿ ತಹ್‌ರೀಕ್ ಜದೀದ್‌ನ ಧ್ಯೇಯೋದ್ದೇಶಗಳನ್ನು ರಮಝಾನಿನ ಪ್ರಕಾಶವಾಗಿ ಅರಿಯಬೇಕು ಎಂಬುದಾಗಿದೆ. ನಾನು ನಿಮಗೆ ತಹ್‌ರೀಕ್ ಜದೀದ್ ಕಡೆ ಗಮನಹರಿಸಲು ಹೇಳಿದ ಉದ್ದೇಶವು ರಮಝಾನಿನ ಧ್ಯೇಯೋದ್ದೇಶಗಳನ್ನು ಮನದಲ್ಲಿರಲಿ ಎಂಬುದಾಗಿದೆ. ಸರಿಯದ ತ್ಯಾಗ ಮತ್ತು ನಿರಂತರ ತ್ಯಾಗ ನಿಮ್ಮ ಅಭ್ಯಾಸವಾಗಿರಲಿ. ಯಾವ ರಮಝಾನ್ ನಿಜವಾದ ತ್ಯಾಗಗಳಲ್ಲದ ಕಳೆದು ಹೋಗುತ್ತದೆಯೋ, ಆ ರಮಝಾನ್ ಅಲ್ಲ, ಮತ್ತು ಆತ್ಮಶುದ್ಧಿ ಪಡೆಯದೆ ಹೋದಂತೆ ತಹ್‌ರೀಕ್ ಜದೀದ್, ತಹ್‌ರೀಕ್ ಜದೀದ್ ಅಲ್ಲ. **(ಖುತುಬ ಜಮಅ 4 ನವೆಂಬರ್ 1938)**.

ಈ ಕುರಿತು ಹುಝೂರ್ (ರ) 11 ನವೆಂಬರ್ 1938 ರಂದು ಖುತುಬ ಪ್ರವಚನದ ಕೊನೆಯಲ್ಲಿ ಜಮಾಅತಿಗೆ ತಹ್‌ರೀಕ್ ಜದೀದ್ ಚಂದಾದಾರರಿಗೆ ವಿಶೇಷವಾಗಿ ಪ್ರಾರ್ಥಿಸಲು ಒತ್ತು ನೀಡುತ್ತಾ ಹೇಳಿದರು. ಬರುವ ರಮಝಾನಿನ ಅಂತಿಮ ದಶಕ (ಅಶ್ರಾ) ವನ್ನು ಗತಿಸಿ ಹೋದ ತ್ಯಾಗಗಳಿಗೆ ಕೃತಜ್ಞೆ ಸಲ್ಲಿಸುತ್ತ ಮತ್ತು ಭವಿಷ್ಯದಲ್ಲಿ ಹೊಸ ಚೈತನ್ಯ ಪಡೆಯಲು ವ್ಯಯ ಮಾಡಿರಿ. ಹೋದ ವರ್ಷಗಳಲ್ಲಿ ಯಾರಿಗೆ ಸಾಂಪತ್ತಿಕ ತ್ಯಾಗ ಮಾಡುವ ಭಾಗ್ಯ ದೊರೆತಿದೆಯೋ ಅವರು ಅಲ್ಲಾಹನಿಗೆ ಕೃತಜ್ಞೆ ಸಲ್ಲಿಸಲು ಪ್ರತಿಯೊಬ್ಬ ಪ್ರಾರ್ಥನೆ ಮಾಡುವವನು ಅಲ್ಲಾಹನಿಂದ ತ್ಯಾಗ ಮಾಡುವವರಿಗಾಗಿ ಪ್ರಾರ್ಥಿಸಲಿ. ಅವರು ಧರ್ಮದ ವೈಭವಕ್ಕಾಗಿ, ಧರ್ಮದ ಸ್ಥಿರತೆಗಾಗಿ ಮಾಡಿದ ತ್ಯಾಗಗಳ ಫಲವಾಗಿ ಅಲ್ಲಾಹನು ಅವರ ಮೇಲೆ ತನ್ನ ಅನುಗ್ರಹಗಳನ್ನು ಕಾರುನ್ಯಗಳನ್ನು ದಯಪಾಲಿಸಲಿ. ಅವರಿಗೆ ತನ್ನ ಸಂಪ್ರೀತಿ ಮತ್ತು ಅನುಗ್ರಹಗಳನ್ನು ದಯಪಾಲಿಸಲಿ. ಆಮೀನ್ (ಅಲ್‌ಫಝ್ಲ್ 15 ನವೆಂಬರ್ 1938 ಪುಟ 4)

ಅಲ್ ಫಝ್ಲ್ ಖಾದಿಯಾನ್ ದಿನಪತ್ರಿಕೆ 29 ನವೆಂಬರ್ ರಲ್ಲಿ ಪ್ರಕಟಗೊಂಡ ಜಾಹೀರಾತಿನನ್ವಯ ನಿಷ್ಠಾವಂತ ಜಮಾಅತ್ ಬಾಂಧವರ ಈ ನೀತಿಯಾಗಿದೆ. ಅವರು ಯಾವಾಗಲೂ ರಮಝಾನಿನ ಮಧ್ಯಭಾಗದವರೆಗೆ ತಮ್ಮ ವಾದೆಯ ಪ್ರಕಾರ ಚಂದ ತಹ್‌ರೀಕ್ ಜದೀದ್) ಶತಪ್ರತಿಶತ ಪಾವತಿಸಿ ಅಲ್ಲಾಹನ ಅನುಗ್ರಹಗಳನ್ನು ಕಾರುಣ್ಯಗಳನ್ನು ಪಡೆಯಲು ಪ್ರಯತ್ನಪಡುತ್ತಾರೆ. ಆದುದರಿಂದ ಅಲ್ಲಾಹನ ಅಪಾರವಾದ ಕೃಪೆಯಿಂದ ಮತ್ತೊಮ್ಮೆ ನಾವು ಅಸಂಖ್ಯಾತ ಅನುಗ್ರಹ ದೈವಿಕ ಕಾರುಣ್ಯಗಳಿಗೆ ಪಾತ್ರರಾಗುವ ಪವಿತ್ರ ರಮಝಾನಿನಲ್ಲಿ ಪಾದಾರ್ಪಣೆ ಮಾಡಿದ್ದೇವೆ. ತಹ್‌ರೀಕ್ ಜದೀದ್ ಸಹಕಾರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಅವರು ತಮ್ಮ ಭವ್ಯ ಪರಂಪರೆಯನ್ನು ದೃಷ್ಟಿಯಲ್ಲಿಟ್ಟುಕೊಂಡು 25 ರಮಝಾನ್ ಅಲ್‌ಮುಬಾರಕ್, ಏಪ್ರಿಲ್ ತಿಂಗಳು 05 ರವರೆಗೆ ತಮ್ಮ ವಾದಾನುಸಾರ ಪರಿಪೂರ್ಣ ಚಂದ ಪಾವತಿಸಿ ಹುಝೂರ್ (ಅಬಿಅ) ರವರ ಸ್ವೀಕಾರ್ಹ ಪ್ರಾರ್ಥನೆಗಳಿಗೆ ಪಾತ್ರರಾಗುವ ಭಾಗ್ಯ ಪಡೆಯುವಿರಿ. ಅಲ್ಲಾಹನು ನಮಗೆಲ್ಲರಿಗೂ ಅಧಿಕಾಧೀಕ ಪಾಲಿಸುವ ಭಾಗ್ಯ ದಯಪಾಲಿಸಲಿ. ಆಮೀನ್

ಸಯ್ಯಿದುನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ರವರು ತಮ್ಮ ಖುತ್‌ಬ ಜುಮುಅ 03–11–2023ರಲ್ಲಿ ತೆಹ್ರೀಕೆ ಜದೀದ್‌ನ 90ನೇ ವರ್ಷದ ಅನುಗ್ರಹದಾಯಕ ಘೋಷಣೆಯಲ್ಲಿ ಹೇಳೀದರು: “ನಿಝಾಮೆ ವಸಿಯ್ಯತ್ ನಿಝಾಮೆ ಖಿಲಾಫತ್‌ನೊಂದಿಗೆ ಬಹಳ ನಿಕಟ ಸಂಬಂಧ ಹೊಂದಿದೆ. ಈಗ ನಿಝಾಮೆ ವಸಿಯ್ಯತ್‌ನೊಂದಿಗೆ ಖುರ್ಬಾನಿಗಳ (ತ್ಯಾಗಗಳ) ಮಟ್ಟವನ್ನು ವರ್ಧಿಸಬೇಕಾಗಿದೆ ಆದ್ದರಿಂದ ಎಲ್ಲಕ್ಕಿಂತ ಮೊದಲು ತ್ಯಾಗವನ್ನು ರೂಢಿಸಿಕೊಳ್ಳುವ ತೆಹ್ರೀಕ್ ಜದೀದ್‌ನ ವ್ಯವಸ್ಥೆ ಇದೆ. ಹೀಗಾಗಿ ಅದರ ಮೇಲೆ ಕೇಂದ್ರೀಕರಿಸಬೇಕಾಗಿದೆ.”

ಅದೇ ರೀತಿ ಹೇಳಿದರು: “ಮಾಅತ್‌ನ ಸುಸ್ಥಿತಿಯಲ್ಲಿರುವ ವಿಭಾಗವೂ ಇದರತ್ತ ಗಮನ ಹರಿಸಲು ಅಲ್ಲಾಹನು ಸಹಾಯ ಮಾಡಲಿ. ಅಲ್ಲಾಹನ ಅನುಗ್ರಹದಿಂದ ಒಳ್ಳೆಯ ಸಂಪಾದನೆ ಮಾಡುವವರಲ್ಲಿ ಕೆಲವರು ಬಹಳ ಜಾಗರೂಕರಾಗಿರುತ್ತಾರೆ, ಆದರೆ ಈಗ ಅವರವರ ಸಾಮರ್ಥ್ಯಕ್ಕೆ ಅನುಗುಣವಾಗಿ ಹೆಚ್ಚಿನ ಜನರನ್ನು ಸೇರಿಸಲು. ಚಂದ ನಿಡಲು ಇನ್ನೂ ಸಾಕಷ್ಟು ಅವಕಾಶವಿದೆ. ಬಡವರು, ನಾನು ಹೇಳಿದಂತೆ ತ್ಯಾಗ ಮನೋಭಾವನೆಗಳಲ್ಲಿ ಬಹಳ ಮುಂಚೂಣಿಯಲ್ಲಿದ್ದಾರೆ ಆದರೆ ಶ್ರೀಮಂತರು ಸಹ ಈ ಬಗ್ಗೆ ಗಮನ ಹರಿಸಬೇಕು.”

ಸರ್ವಶಕ್ತನಾದ ಅಲ್ಲಾಹನು ನಮಗೆ ಹುಝೂರ್ ಅನ್ವರ್[ಅತಬಿಅ] ರ ಅಧ್ಯಾಪನೆಗಳ ಮೇಲೆ ನಮ್ಮೆಲ್ಲರಿಗೂ ಪಾಲಿಸುವ ತೌಫೀಖ್ ನೀಡಲಿ. ಆಮೀನ್.

**(ವಕೀಲುಲ್ ಮಾಲ್ ತಹರೀಕ್ ಜದೀದ್ ಖಾದಿಯಾನ್)**

**"ಉಪವಾಸ ಮಾಡಿರಿ, ಆರೋಗ್ಯ ಪಡೆಯಿರಿ."**
**"ಜನರಿಗೆ ಕೃತಜ್ಞತೆ ಸಲ್ಲಿಸದವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸಲಾರನು."**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**M.B. Nasir Ahmed & Family, Bengaluru, Karnataka**

**ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ. ಆದರೆ ಜನರು ಅದನ್ನು ಅರಿತಿಲ್ಲ.**
(ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್)

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.05, Thursday, 11 April 2024, Issue No. 15

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

**3 ಅಕ್ಟೋಬರ್ 2022 ಸೋಮವಾರ**

ಹುಝೂರೆ ಅನ್ವರ್(ಅತಬಿಅ) ಮುಂಜಾನೆ 6.10 ಗಂಟೆಗೆ ಮಸ್ಜಿದ್ ಬೈತುಲ್ ಇಕ್ರಾಮ್ ಡಲ್ಲಸ್‌ನಲ್ಲಿ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಂತರ ಹುಝೂರ್ ತಮ್ಮ ವಸತಿಯತ್ತ ತೆರಳಿದರು.

ಮುಂಜಾನೆ ಹುಝೂರೆ ಅನ್ವರ್(ಅತಬಿಅ) ಅಂಚೆಗಳನ್ನು ಪರಿಶೀಲಿಸಿದರು. ವಿವಿಧ ದೇಶಗಳಿಂದ ಬಂದ Faxes, ಇಮೇಲ್, ಮತ್ತು ವರದಿಗಳನ್ನು ಪರಿಶೀಲಿಸಿದರು. ನಂತರ ನಿರ್ದೇಶನಗಳನ್ನು ನೀಡಿದರು. ಇಲ್ಲಿ ಅಮೇರಿಕಾದಿಂದಲೂ ದಿನಾಲೂ ಜಮಾಅತ್ ಬಾಂಧವರ ಪತ್ರಗಳು ಬರುತ್ತವೆ. ಹುಝೂರೆ ಅನ್ವರ್(ಅತಬಿಅ) ಈ ಪತ್ರಗಳು ಸಹ ಪರಿಶೀಲಿಸುತ್ತಾರೆ ಮತ್ತು ಉತ್ತರಿಸುತ್ತಾರೆ.

**ಕೌಟುಂಬಿಕ ಭೇಟಿಗಳು**

ಕಾರ್ಯಕ್ರಮದನ್ವಯ ಮುಂಜಾನೆ 11:10 ಗಂಟೆಗೆ ಹುಝೂರೆ ಅನ್ವರ್(ಅತಬಿಅ) ಕಛೇರಿಗೆ ಆಗಮಿಸಿದರು ಮತ್ತು ಕುಟುಂಬ ಭೇಟಿಗಳನ್ನು ಪ್ರಾರಂಭಿಸಿದರು. ಇಂದು ಮುಂಜಾನೆಯ ಈ ಅಧಿವೇಶನದಲ್ಲಿ 31 ಕುಟುಂಬಗಳು 119 ಜನರು ತಮ್ಮ ನೇತಾರರೊಂದಿಗೆ ಭೇಟಿ ಮಳಾಡುವ ಭಾಗ್ಯ ಪಡೆದರು. ಇವೆಲ್ಲ ಕುಟುಂಬಗಳು ಹುಝೂರೆ ಅನ್ವರ್(ಅತಬಿಅ) ಪ್ರೀತಿಪೂರ್ವಕವಾಗಿ ವಿದ್ಯೆ ಪಡೆಯುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಲೇಖನಿ ನೀಡಿದರು. ಮತ್ತು ಸಣ್ಣ ವಯಸ್ಸಿನ ಮಕ್ಕಳಿಗೆ ಚಾಕ್ಲೇಟ್ ನೀಡಿದರು.

ಇಂದು ಭೇಟಿ ನೀಡುವ ಈ ಕುಟುಂಬಗಳು Dallas ನ ಸ್ಥಳೀಯ ಜಮಾಅತ್‌ನವರಲ್ಲದೇ ಬೇರೆ ಜಮಾಅತ್‌ನವರು ಸಹ ಆಗಮಿಸಿದ್ದರು. ಅವು ಇಂತಿವೆ.ಆಮಿರ್ ಮುಹ್ಮದ್ ನಾಗಿ ಸಾಹಿಬ್ ಅವರು ಅಹ್ಮದಿಯಾ ಜಮಾಅತ್ ಈಠಡಿಣ ತಿಠಡಿಣು ನಿಂದ ಬಂದಿದ್ದರು. ಹೇಳಿದರು. ಭೇಟಿಯ ಮುಂಚೆ ನಮಗೆ ಈ ಚಿಂತೆ ಕಾಡುತ್ತಿತ್ತು. ನಾವು ಹುಝೂರರ ಜೊತೆ ಮಾತನಾಡಲು ಆಗಲಿಕ್ಕಿಲ್ಲ. ಆದರೆ ಒಳಗೆ ಹೋಗುತ್ತಿದ್ದಂತೆ ನಮಗೆ ಎಷ್ಟೊಂದು ನೆಮ್ಮದಿ ದೊರಕಿತ್ತೆಂದರೆ ನಾವು ಯಾವ ವಿಷಯದಲ್ಲಿ ಮಾತನಾಡಬಹುದಾಗಿತ್ತು.

Los Angeles, Tuisa, Austin, Orland, San Diego, Portland, Forth worth, Georgia, Phiadelphia, Houston.

ಇಂದು ಮುಂಜಾನೆ ಸಹ ಕೆಲವು ಕುಟುಂಬಗಳು ಬಹು ದೂರದ ಪ್ರಯಾಣ ಬೆಳೆಸಿ ಇಲ್ಲಿ ತಲುಪಿದ್ದರು. Onlando ಜಮಾಅತ್‌ನಿಂದ ಬರುವವರ ಕುಟುಂಬಗಳು 1106 ಮೈಲು Ban Diago ನಿಂದ ಬರುವ ಕುಟುಂಬಗಳು 1379 ಮೈಲು, ಅದಾಗ್ಯೂ ಲಾಸ್ ಎಂಜೆಲ್ಸ್‌ನಿಂದ ಬರುವ ಕುಟುಂಬಗಳು 1433 ಮೈಲು ಮತ್ತು ಫಲಾಡಲ್‌ಫಿನಿಂದ ಬರುವ ಕುಟುಂಬಗಳು 1473 ಮೈಲಿನ ದೂರ ಪ್ರಯಾಣಿಸಿ ತಮ್ಮ ನೇತಾರರನ್ನು ಭೇಟಿ ಮಾಡಲು ಬಂದು ತಲುಪಿದ್ದರು. ಅವರಲ್ಲಿ ಪ್ರತಿಯೊಬ್ಬರು ಸಂತಸಪಟ್ಟು ಹೊರಗೆ ಬಂದರು. ರೋಗಿಗಳು ತಮ್ಮ ಆರೋಗ್ಯಕ್ಕಾಗಿ ಪ್ರಾರ್ಥನೆ ಬಯಸಿದರು. ಬಾಲಕ ಬಾಲಕಿಯರು ತಮ್ಮ ಶಿಕ್ಷಣ ಹಾಗೂ ಪರೀಕ್ಷೆಗಳಲ್ಲಿ ಉತ್ತೀರ್ಣತೆಗಾಗಿ ಪ್ರಾರ್ಥನೆ ಬಯಸಿದರು. ವಿವಿಧ ಸಮಸ್ಯೆಗಳಿಗೆ ಒಳಗಾದ, ಸಂಕಷ್ಟಗಳಿಗೆ ಒಳಗಾದ ಜನರು ತಮ್ಮ ಸಂಕಷ್ಟಗಳ ನಿವಾರಣೆಗಾಗಿ ಪ್ರಾರ್ಥನೆ ಬಯಸಿದರು. ಪ್ರತಿಯೊಬ್ಬರು ಪ್ರಾರ್ಥನೆಗಳ ಖನಿಜವನ್ನು ಪಡೆದು ಹೊರಗೆ ಬಂದರು. ಮತ್ತು ತಮ್ಮ ಆಶಯ ಹೊಂದಿ ಮರಳಿದರು. ಮನಸ್ಸುಗಳಿಗೆ ತೃಪ್ತಿ ದೊರೆಯಿತು. ಪ್ರತಿಯೊಬ್ಬರೂ ಈ ವಿಷಯ ತಿಳಿದವರಾಗಿದ್ದರು ನಾವು ತಮ್ಮ ನೇತಾರರೊಂದಿಗೆ ಕಳೆದ ಈ ಕ್ಷಣಗಳೇ ನಮ್ಮ ಜೀವನದ ಬಂಡವಾಳವಾಗಿದೆ.

**ಮಸೀದಿ ಫಲಕ ಅನಾವರಣ**

ಸಭಾ ಕಾರ್ಯಕ್ರಮದ ನಂತರ ಹುಝೂರೆ ಅನ್ವರ್(ಅತಬಿಅ) ಮಸೀದಿಯ ಗೋಡೆಯಲ್ಲಿ ಅಳವಡಿಸಲಾದ ಫಲಕವನ್ನು ಅನಾವರಣಗೊಳಿಸಿದರು. ಮತ್ತು ಪ್ರಾರ್ಥಿಸಿದರು. ನಂತರ ಮಧ್ಯಾಹ್ನ 1.45 ಕ್ಕೆ ಹುಝೂರೆ ಅನ್ವರ್(ಅತಬಿಅ) ಮಸ್ಜಿದ್ ಉಲ್-ಇಶ್ರಾವರವರಿಗೆ ಭೇಟಿ ನೀಡಿ ಝುಹರ್ ಅಸರ್ ಪ್ರಾರ್ಥನೆ (ನಮಾಝ್) ಸಲ್ಲಿಸಿದ್ದರು. ಪ್ರಾರ್ಥನೆಯನ್ನು ನೆರವೇರಿಸಿದ ನಂತರ ಹುಝೂರೆ ಅನ್ವರ್(ಅತಬಿಅ) ಅವರ ನಿವಾಸಕ್ಕೆ ತೆರಳಿದರು.

**ಕೌಟುಂಬಿಕ ಭೇಟಿಗಳು**

ಕಾರ್ಯಕ್ರಮದನ್ವಯ 6.15ಕ್ಕೆ ಹುಝೂರೆ ಅನ್ವರ್(ಅತಬಿಅ) ತಮ್ಮ ಕಚೇರಿಗೆ ಆಗಮಿಸಿದರು ಮತ್ತು ಕುಟುಂಬ ಭೇಟಿಗಳು ಪ್ರಾರಂಭವಾಯಿತು.

ಇಂದು ಸಂಜೆಯ ಈ ಅಧಿವೇಶನದಲ್ಲಿ 32 ಕುಟುಂಬಗಳ 129 ಜನರು ಭೇಟಿಯ ಭಾಗ್ಯ ಪಡೆದರು. ಇವೆಲ್ಲ ಕುಟುಂಬಗಳು ಹುಝೂರೆ ಅನ್ವರ್(ಅತಬಿಅ) ವಿದ್ಯೆ ಕಲಿಯುತ್ತಿರುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಲೇಖನಿ ನೀಡಿದರು. ಸಣ್ಣ ವಯಸ್ಸಿನ ಮಕ್ಕಳಿಗೆ ಸಿಹಿ ಹಂಚಿದರು.

ಇಂದು ಸಂಜೆ ಭೇಟಿ ನೀಡಿರುವ ಕುಟುಂಬಗಳು

Dallas, Seattle, Houston, Fort worth, Georgia , Austin, Bay Point, Sandiego, ಯಿಂದ ಬಂದಿದ್ದರು.

ಇಂದು ಸಹ ಕೆಲವು ಕುಟುಂಬಗಳು ಬಹಳ ದೂರದ ಪ್ರಯಾಣ ಬೆಳೆಸಿ ಬಂದಿದ್ದರು. ಜಾರ್ಜಿಯಾಯಿಂದ ಬಂದ ಕುಟುಂಬಗಳು 798 ಮೈಲು, San Diego ನಿಂದ ಕುಟುಂಬಗಳು 1379 ಮೈಲು, Bay point ನಿಂದ ಬಂದ ಕುಟುಂಬಗಳು 1712 ಮೈಲು, Seatte ನಿಂದ ಬಂದ ಕುಟುಂಬಗಳು 2095 ಮೈಲಿಯಷ್ಟು ದೂರ ಕ್ರಮಿಸಿ ಇಲ್ಲಿ ತಲುಪಿದ್ದರು.

ಇವರೆಲ್ಲರಲ್ಲಿ ಬಹಳಷ್ಟು ಜನರು ತಮ್ಮ ಜೀವನದಲ್ಲಿ ಮೊದಲ ಬಾರಿಗೆ ತಮ್ಮ ನೇತಾರರೊಡನೆ ಭೇಟಿಯ ಭಾಗ್ಯ ಪಡೆದವರಾಗಿದ್ದರು. ಅವರ ಭಾವನೆಗಳು ಅವರ ಸಂತಸ ಹೇಳಬೇಕೆಂದಿತ್ತು.

ಆಮಿರ್ ಮಹ್ಮೂದ್ ನಾಗಿ ಸಾಹಿಬ್ ಅವರು ಅಹ್ಮದಿಯಾ ಜಮಾಅತ್ Fort worth ನಿಂದ ಬಂದಿದ್ದರು ಅವರು ಹೇಳಿದರು. ಭೇಟಿಯ ಮುಂಚೆ ನಮಗೆ ಈ ಚಿಂತೆ ಕಾಡುತ್ತಿತ್ತು. ನಾವು ಹುಝೂರೆ ಅನ್ವರ್(ಅತಬಿಅ)ರ ಜೊತೆ ಮಾತನಾಡಲು ಆಗಲಿಕ್ಕಿಲ್ಲ. ಆದರೆ ಒಳಗೆ ಹೋಗುತ್ತಿದ್ದಂತೆ ನಮಗೆ ಎಷ್ಟೊಂದು ನೆಮ್ಮದಿ ದೊರಕಿತ್ತೆಂದರೆ ನಾವು ಯಾವ ವಿಷಯದಲ್ಲಿ ಮಾತನಾಡಬಹುದಾಗಿತ್ತು.

ಜಾರ್ಜಿಯಾ ಜಮಾಅತ್‌ನಿಂದ ಬಂದ ಮಿತ್ರರೊಬ್ಬರು ಕಾಶಿಫ್ ಮೆಹ್ಮೂದ್ ಬಟ್ ಸಾಹಿಬ್ ಹೇಳುತ್ತಾರೆ. ಹುಝೂರೆ ಅನ್ವರ್(ಅತಬಿಅ) ನನಗೆ ಉಪದೇಶ ನೀಡುತ್ತಾ ಹೇಳಿದರು. ನೋಡಿ ಅಲ್ಲಾಹನು ಸಾಂಪತ್ತಿಕವಾಗಿ ಎಷ್ಟೊಂದು ಉದಾರವಾಗಿ ದಯಪಾಲಿಸಿದ್ದಾನೆ. ಈಗ ಸಮಯ ಬಂದಿದೆ. ನೀವು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿರಿ ಮತ್ತು ಅನ್ಫಾಖ್ ಫೀ ಸಬೀಲಿಲ್ಲಾಹ್‌ದಲ್ಲಿ ಭಾಗವಹಿಸಿರಿ.

ನಾಸಿರ್ ರಾಝೀ ಸಾಹಿಬ್ ಅವರು San Diego ನಿಂದ 1379 ಮೈಲು ದೂರದ ಪ್ರಯಾಣ ಬೆಳೆಸಿ ಭೇಟಿಕ್ಕೋಸ್ಕರ ಬಂದಿದ್ದರು. ಹೇಳುತ್ತಾರೆ. ನನ್ನ ಹೆಸರು ಕೇಳುತ್ತಲೇ ಹುಝೂರೆ ಅನ್ವರ್(ಅತಬಿಅ)ರಿಗೆ ನಾನು ಯಾರಾರೆಂಬುದನ್ನು ತಿಳಿಯಿತು. ಹುಝೂರೆ ಅನ್ವರ್(ಅತಬಿಅ) ನನ್ನ ಕುಟುಂಬದವರಿಗೆ ಅರುಹಿದವರಾಗಿದ್ದರು. ಹುಝೂರೆ ಅನ್ವರ್(ಅತಬಿಅ) ನನ್ನ ಕುಟುಂಬದವರು ಎಲ್ಲ ಇರುವರು ಎಂಬುದನ್ನು ಸಹ ಅರಿತದ್ದನ್ನು ಕಂಡು ನನಗೆ ಆಶ್ಚರ್ಯವಾಯಿತು. ಹುಝೂರೆ ಅನ್ವರ್(ಅತಬಿಅ) ನನಗೆ ತಿಳಿಸಿದರು. ಇಮ್ಮ ಓರ್ವ ಸಹೋದರ ಅತ್ತೆ ಜರ್ಮನಿಯಲ್ಲಿ ಇರುತ್ತಾರೆ. ಮತ್ತೊಬ್ಬರು ಫ್ರಾನ್ಸ್‌ನಲ್ಲಿರುತ್ತಾರೆ.

**(ಮುಂದುವರಿಯುವುದು)**

**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

**Love for All, Hatred for None**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.